# ಅಪರಂಜಿ

ತಿಳಿನಗೆಯ ಕಾರಂಜಿ



ಆಗಸ್ಟ್ - 2013





# ಅಪರಂಜಿ



ತಿಳಿನಗೆಯ ಕಾರಂಜಿ


**ಸಂಪಾದಕ ಮಂಡಳಿ**

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಟ್ರಸ್ಟಿಗಳು**
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

**ವಿಶೇಷ ಆಹ್ವಾನಿತರು**
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

**ಗೌರವ ಸಲಹೆಗಾರರು**
ಶ್ರೀ ಅ.ರಾ.ಸೇ.


**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ




**ಸಂಪುಟ 30**
**ಸಂಚಿಕೆ - 11**
**ಆಗಸ್ಟ್ - 2013**


## ಈ ಸಂಚಿಕೆಯಲ್ಲಿ.....


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನಿಮ್ಮಲ್ಲಿ | **ಶಿವಕುಮಾರ್** | 3 |
| ಹೊಸ ಜೀವ | **ಸು. ವಿಜಯಲಕ್ಷ್ಮಿ** | 6 |
| ಸಂಶೋಧನೆಯ....... | **ಕೃಷ್ಣ ಸುಬ್ಬರಾವ್** | 11 |
| ನಮ್ಮ ದೇಶಾನ ಚೊಕ್ಕಟ... | **ಇ.ಆರ್. ರಾಮಚಂದ್ರನ್** | 15 |
| ಟೋಪಿವಾಲಾ! | **ಶರತ್ ಕಲ್ಕೋಡ್** | 18 |
| ತುಂತುರು | **ದಂನಾಳ** | 22 |
| ಯಾರು ಅಡ್ರೆಸ್ ಹೇಳಿದ್ದು | **ಬೇಲೂರು ರಾಮಮೂರ್ತಿ** | 23 |
| ಅಂಬಕ್ಕನ ಬೂತ್ | **ಪ್ರೊ. ಶ್ಯಾಮಲಾ ರವಿಶಂಕರ್** | 25 |
| ವಾಸ್ತು ಎಂಬ ನಾನ್‌ಸೈನ್ಸ್ | **ಭಾರತಿ ಬಿ.ವಿ.** | 29 |
| ಮನೆಯೊಂದು ಮೂರು... | **ನೀರಗುಂದ ಕೇಶವಮೂರ್ತಿ ರಾವ್** | 35 |
| ಯಾರಾದರೇನು ಶಿವಾ? | **ನಮೋರಾಗಾ** | 37 |
| ಹುರುಳಿಕಟ್ಟು | **ಎಚ್. ಗೋಪಾಲಕೃಷ್ಣ** | 39 |


**ಮುಖಪುಟ ವ್ಯಂಗ್ಯಚಿತ್ರ - ಗುಜ್ಜಾರ್**


*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*
ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanji42@hotmail.com



ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

# ಅಪರಂಜಿ ಕಿಡಿ

● ಪ್ರಕಾಶ್



''ಕರ್ನಾಟಕ ಸರ್ಕಾರಕ್ಕೆ ಮೂಗುದಾರ'' – ಶೀರ್ಷಿಕೆ

**● ''ದಿಗ್ವಿ-ಜಯ'' ಎಂದರೇನು ಎಂದು ಈಗ ಅರ್ಥವಾಯಿತು !!**

★★★

''ಸಿ.ಇ.ಟಿ.'' ಗೊಂದಲ – ಸುದ್ದಿ

**● ಇದು ಸನಾತನ ಪದ್ಧತಿಯಾಗಿ ಹೋಗಿದೆ !!**

★★★

''ಕೆ.ಪಿ.ಎಸ್.ಸಿ. ಕರ್ಮಕಾಂಡ'' – ಶೀರ್ಷಿಕೆ

**● ಆಹಾ, ಶೀರ್ಷಿಕೆ ಎಂದರೆ ಹೀಗಿರಬೇಕು !!**

★★★

''ಅಡ್ಡ ಪರಿಣಾಮ ಬೀರದ ಹೋಮಿಯೋಪತಿ'' – ಹೇಳಿಕೆ

**● ಪರಿಣಾಮ ಇಲ್ಲದೆಡೆ ''ಅಡ್ಡ'' ಎಲ್ಲಿ ಬರುತ್ತೆ ?!**

★★★

''ವೈದ್ಯಕೀಯ ಮುನ್ನೂರಕ್ಕೂ ಹೆಚ್ಚುವರಿ ಸೀಟು'' – ಸುದ್ದಿ

**● ಅಷ್ಟೊಂದು ರೋಗಿಗಳನ್ನ ಎಲ್ಲಿಂದ ತರೋದು ?!**

★★★

ಕನ್ನಡ ಪಠ್ಯಪುಸ್ತಕದಲ್ಲಿ ಪ್ರಮಾದಗಳ ಸರಮಾಲೆ – ಪತ್ರಿಕೆ

**● ಅಗ್ಗದ ಶೆಟ್ಟಿ........ !!**

★★★

ಐ.ಪಿ.ಎಲ್. ಹಗರಣದ ಬಗ್ಗೆ ಪಿ.ಐ.ಎಲ್. ಹಾಕಬಾರದೇಕೆ?!

★★★

ಮತ್ತೆ ಅಯೋಧ್ಯೆಯಲ್ಲಿ ಮಂದಿರ – ಸುದ್ದಿ

**● ರಾಮ, ರಾಮ !!**

★★★

## ಓದುಗರ ಅಭಿರುಚಿ

ನಮ್ಮ ನಿಮ್ಮಲ್ಲಿ ಅಂಕಣದಲ್ಲಿ ಶ್ರೀ ಶಿವಕುಮಾರ್ ಬರೆದ ಗ್ಯಾಂಗ್ಟಕ್ ಪೆಲ್ಲಿಂಗ್ ಬಗೆಗಿನ ಲೇಖನ ತುಂಬಾ ಚೇತೋಹಾರಿಯಾಗಿದೆ. ವಿಶೇಷವಾಗಿ ಹೋಟೆಲಿನ ಮ್ಯಾನೇಜರ್ ಗೋಪಾಲ್ ದಾಸ್ ಥಾಪಾ ಅವನ ಮಾತುಗಳು, ಡ್ರೈವರ್‌ಗೆ ಗೋಪಾಲನ ನಡವಳಿಕೆ ಇವೆಲ್ಲ ತುಂಬಾ ಚೆನ್ನಾಗಿ ಮೂಡಿಬಂದಿದೆ. ಇವುಗಳು ಬರೀ ಓದುವುದಕ್ಕಲ್ಲ ಅಳವಡಿಸಿಕೊಳ್ಳುವಂಥವು. ಪ್ರವಾಸ ಬರೀ ಮನರಂಜನೆಯಲ್ಲ, ಅದೊಂದು ಕಲಿಕೆಯ ಪ್ರಕ್ರಿಯೆ.

ನಾನು ಸತ್ತಾಗ (ಹೆಚ್.ಜಿ. ಸೋಮಶೇಖರ ರಾವ್) ಲೇಖನ ನನ್ನ ಹೃದಯ ತಟ್ಟಿತು. ಲೇಖಕರು ನನ್ನಷ್ಟೇ ವಯಸ್ಸಿನವರಾದ್ದರಿಂದ (ಹೆಚ್ಚಿಗೆ ಇದ್ದರೂ ಇರಬಹುದು) ಲೇಖನ ಓದುತ್ತಿದ್ದಂತೆ ನನ್ನನ್ನ ತೀವ್ರವಾದ ಭಾವನಾಲೋಕಕ್ಕೆ ಕೊಂಡೊಯ್ಯಿತು. ಅವರು ಜೀವನವನ್ನು ನೋಡುವ ರೀತಿ ಹೃದಯಕ್ಕೆ ಹತ್ತಿರವಾದದ್ದು, ಕೇವಲ ಅವರದಲ್ಲ ನನ್ನದೂ ಹೌದು.


– ಗುಂಡೂ ರಾವ್ ನಾಗೇಶ್, ಬೆಂಗಳೂರು

# "ನಮ್ಮ ನಿಮ್ಮಲ್ಲಿ"

**ಮ**ಗಳು ಅಳಿಯ ಇಂಗ್ಲೆಂಡಿನಿಂದ ಸಿಂಗಪುರಕ್ಕೆ ವಲಸೆ ಬಂದನಂತರ ನಾನು ಅರಬ್ಬೀ ಸಮುದ್ರವನ್ನು ಹಾರುವ ಬದಲು ಹನುಮಂತನಂತೆ ಹಿಂದೂ ಮಹಾಸಾಗರವನ್ನು ಹಾರಿ ಅವರಿರುವ ಊರನ್ನು ತಲುಪುವ ಪರಿಸ್ಥಿತಿ ಒದಗಿದೆ. ಈ ಬಾರಿ ಮೂರು ವಾರಗಳ ಮಟ್ಟಿಗೆ ಅಲ್ಲಿಗೆ ಪ್ರವಾಸ ಹೋಗಿದ್ದಾಗ ಅಲ್ಲಿ ಒಂದು ಒಳ್ಳೆಯ ನಾಟಕವನ್ನು ನೋಡುವ ಅವಕಾಶ ದೊರಕಿತು. ನಾಟಕದ ಹಸರು ಕುಕ್ ಎ ಪಾಟ್ ಆಫ್ ಕರ್ರಿ.. ನಾಟಕದ ಭಾಷೆ ಸಿಂಗ್ಲೀಷ್. ಅಂದರೆ ಸಿಂಗಪುರದವರು ಮಾತನಾಡುವ ಇಂಗ್ಲಿಷ್. ಇದು ಚೀನೀ ಪದಗಳನ್ನು ಮಧ್ಯೆ ಮಧ್ಯೆ ಸೇರಿಸಿ ಚೀನೀ ಸ್ವರದಲ್ಲಿ ಮಾತನಾಡುವ ಇಂಗ್ಲಿಷ್. ಪಾತ್ರವರ್ಗದವರೆಲ್ಲಾ ಬೇರೆ ಬೇರೆ ಮೂಲಗಳಿಂದ ವಲಸೆ ಬಂದ ಸಿಂಗಪುರದ ನಾಗರಿಕರೇ. ಇವರಲ್ಲಿ, ಐದಾರು ಚೀನೀಯರು, ಒಬ್ಬ ಸಿಂಧಿ, ಇಬ್ಬರು ಮಲೇಷ್ಯಾದವರು. ಇವರುಗಳನ್ನು ಸುಲಭವಾಗಿ ಗುರುತಿಸಬಹುದಾಗಿತ್ತು. ಎಲ್ಲರೂ ಅತ್ಯಂತ ಪರಿಣತಿ ಹೊಂದಿದ ವೃತ್ತಿನಿರತ ನಟ ನಟಿಯರೇ ಅನ್ನಿ. ಮುಖ್ಯ ಪಾತ್ರದಲ್ಲಿ ರಿಷಿ ಬುಧ್ರಾನಿ ಮತ್ತು ನಿಯೋ ಸ್ವೀ ಲಿನ್ ಇವರುಗಳು ತಮ್ಮ ನಟನ ಚಾತುರ್ಯದಿಂದ ಪ್ರೇಕ್ಷಕರ ಮೆಚ್ಚಿಗೆ ಪಡೆದರು.

ನಾಟಕದ ವೇದಿಕೆ ಮಿನಿಮಲಿಸ್ಟ್ ಎನ್ನಬಹುದಾದ ಪರಿಕರಗಳಿಂದ ಕೂಡಿತ್ತು. ನಟ ನಟಿಯರು ಕುಳಿತು ಮಾತನಾಡಲು ಹಲವು ಕ್ಯೂಬ್‌ಗಳನ್ನು ಅಲ್ಲಲ್ಲಿ ಹರಡಿದ್ದರು. ಸ್ಟೇಜಿನ ಹಿಂದನ ತೆರೆಯ ಮೇಲೆ ಅಗತ್ಯಬಂದ ವಿಡಿಯೋ ಕ್ಲಿಪ್‌ಗಳನ್ನು ಪ್ರೊಜೆಕ್ಟ್ ಮಾಡಿ ಊರಿನ ಜನಭರಿತ ರಸ್ತೆಗಳು, ಉದ್ಯಾನವನದ ದೃಶ್ಯ ಇವುಗಳನ್ನು ಒಂದೇ ಕ್ಷಣದಲ್ಲಿ ಪ್ರತಿಬಿಂಬಿಸುತ್ತಿದ್ದುದು ಒಂದು ಮೋಜಿನ ಸಂಗತಿ. ನಾಟಕದ ಮೊದಲ ದೃಶ್ಯದಲ್ಲಿ ನೆರೆಹೊರೆಯಲ್ಲಿ ವಾಸಿಸುತ್ತಿದ್ದ ಒಂದು ಚೀನೀ ಕುಟುಂಬ ಮತ್ತು ಒಂದು ಭಾರತೀಯ ಕುಟುಂಬ ಇವರಿಬ್ಬರ ನಡುವೆ ತೀವ್ರವಾದ ಮಾತಿನ ಚಕಮಕಿ ನಡೆದು ಅದನ್ನು ಪರಿಹರಿಸಲು ಸರ್ಕಾರದ ಸಮನ್ವಯ ಅಧಿಕಾರಿಣಿಯೊಬ್ಬಳು ವ್ಯರ್ಥ ಪ್ರಯತ್ನ ನಡೆಸಿರುತ್ತಾಳೆ.

ಭಾರತೀಯ ದಂಪತಿಗಳ ಪಾತ್ರವನ್ನು ರಿಷಿ ಮತ್ತು ನಿಯೋ ವಹಿಸಿದ್ದರು. ಭಾರತೀಯ ಸೀರೆ ಧರಿಸಿದ್ದ ಚೀನೀ ಯುವತಿ ನಿಯೋ ಇಂಡಿಯನ್ ಇಂಗ್ಲೀಷಿನಲ್ಲಿ ಮಾತಾಡಿದ್ದು ನಿಜಕ್ಕೂ ಬಹಳ ತಮಾಷೆಯಾಗಿತ್ತು. ಅವರುಗಳ ವಾದವಿವಾದಕ್ಕೆ ಕಾರಣ ಇಷ್ಟೇ. ಭಾರತೀಯ ನಾರಿ ತನ್ನ ಮನೆಯಲ್ಲಿ ಅಡುಗೆ ಮಾಡುತ್ತಿದ್ದ ಹುಳಿ ತೊವ್ವೆಗಳ ಘಮ ಘಮ ಪಕ್ಕದ ಮನೆಯ ಚೀನೀ ಮೂಗುಗಳಿಗೆ ಒಂದು ಅತ್ಯಂತ ಘಾಟಿನಿಂದ ಕೂಡಿದ ಹಾಗೂ ತಡೆಯಲು ಅಸಾಧ್ಯವಾದ ದುರ್ವಾಸನೆಯಾಗಿ ಕಾಣುತ್ತದೆ. ಪ್ರತಿದಿನದ ಸಮಸ್ಯೆಯಾದ ಇದನ್ನು




ತಡೆಯಲು ಇವರು ಅಧಿಕಾರಿಣಿಯ ಮೊರೆ ಹೋಗುತ್ತಾರೆ. ಇಲ್ಲಿ ಸ್ವಲ್ಪ ನೋಡಿ ಅವರ ಡಯಲಾಗಿನ ಸ್ಯಾಂಪಲ್.

ಚೀನೀ ಮನೆಯಾಕೆ : ದಿನಾ ಬೆಳಗ್ಗೆ ಪಕ್ಕದ ಮನೆಯಿಂದ ಅಸಾಧ್ಯ ದುರ್ನಾತ. ಅವರು ಕೂಡಲೇ ಅದನ್ನ ನಿಲ್ಲಿಸಬೇಕು ಇಲ್ಲಾ ಮನೆ ಖಾಲಿ ಮಾಡಬೇಕು. ಈ ದೇಶಕ್ಕೆ ಬಂದ ಮೇಲೆ ಇಲ್ಲಿನೋರ ತರಹಾ ಇರಬೇಕಪ್ಪಾ.

ಭಾರತೀಯ ಮನೆಯಾಕೆ : ಅಹಹಾ, ದುರ್ನಾತ ಅಂತೆ ದುರ್ನಾತ. ಮನೆ ಬಿಡಬೇಕೋ? ಮೊದಲು ನಿನ್ನ ಕಣ್ಣುಗ್ಗಳನ್ನ ದೊಡ್ಡದು ಮಾಡಿಸ್ಕೋ, ಬೆಳಗಾಗೆದ್ದು ಆ ಸೀಳು ಕಣ್ಣುಗ್ಗಳನ್ನು ನೋಡೋದು ಅಪಶಕುನ.

(ಅವರಿಬ್ಬರ ನಡುವೆ ಲಟ್ಟಾಪಟ್ಟಿ ಶುರುವಾಗುತ್ತೆ)

ಸಮನ್ವಯ ಅಧಿಕಾರಿ : ಶಾಂತಿ, ಶಾಂತಿ. ಇಬ್ಬರೂ ಶಾಂತರಾಗಿ. ಒಬ್ಬರ ಮೇಲೆ ಇನ್ನೊಬ್ಬರು ಕೈ ಮಾಡಬಾರದು. ಈಗ ಯಾರಾದ್ರೂ ಒಬ್ಬರು ಸ್ವಲ್ಪ ಬಿಟ್ಟುಕೊಡಬೇಕು. (ಭಾ.ಮ. ಕಡೆ ತಿರುಗಿ) ನೀನೇನು ಹೇಳ್ತೀಯಮ್ಮಾ?

ಭಾರತೀಯ ಮನೆಯಾಕೆ : ಅವರಿಗೆ ನಮ್ಮ ಅವರೇಕಾಯಿ ಹುಳಿ, ಹಾಗಲ ಕಾಯಿ ಗೊಜ್ಜು ಇವುಗಳ ರುಚಿ ತಿಳಿದಿಲ್ಲ. ನಾಳೆ ಒಂದು ಪಾಟ್‌ನಲ್ಲಿ ರುಚಿ ರುಚಿಯಾಗಿರೋ ಕರಿ ಮಾಡಿಕೊಡ್ತೇನೆ ಅವರು ತಿಂದು ಆಮೇಲೆ ಹೇಳಲಿ ಅದು ದುರ್ನಾತಾನೋ ಅಥವಾ ಘಮ ಘಮನೋ ಅಂತ.

ಚೀನೀ ಮನೆಯಾತ : (ಛಂಗನೆ ಎದ್ದು ನಿಂತು) ಈ ಸಲಹೆಗೆ ನನ್ನ ಸಂಪೂರ್ಣ ಒಪ್ಪಿಗೆ...... (ಅಂತ ಹೇಳುತ್ತಿರುವಾಗಲೇ ಅವನ ಹೆಂಡತಿ ಎದ್ದು ಅವನ ಕಾಲರ್ ಹಿಡಿದು) ಓಹೋ ಆ ಚಿನಾಲಿ ಮಾಡಿದ್ದನ್ನ ತಿನ್ನುಕ್ಕೆ ಚಪ್ಪರಿಸಿಕೊಂಡು ನಿಂತಿರೋದು ನೋಡು.........

ಈ ಧಾಟಿಯಲ್ಲಿ ನಡೆದ ನಾಟಕ ನಿಜಕ್ಕೂ ನೋಡುಗರ ಗಮನವನ್ನು ಸೆಳೆಯುವುದರಲ್ಲಿ ಯಶಸ್ವಿಯಾಗಿತ್ತು. ಇನ್ನೊಂದು ದೃಶ್ಯದಲ್ಲಿ ನಟಿ ನಿಯೋ ಚೀನೀ ಕಿಮಾನೋ ಧರಿಸಿ ಒಂದು ನರ್ತನ ಮಾಡುತ್ತಾ, ಭಾವಗೀತೆ ಹಾಡುತ್ತಾ ವೇದಿಕೆಗೆ ಬರುತ್ತಾಳೆ. ಒಬ್ಬ ಪ್ರೇಯಸಿ ತನ್ನ ಪ್ರಿಯಕರನಿಲ್ಲದಿರುವುದರಿಂದ ವಿರಹ ವೇದನೆಯನ್ನು ಅನುಭವಿಸುತ್ತಾ ಹಾಡುವ ಒಂದು ಕವನ ಅದು. ಹಾಡನ್ನು ಹಾಡುತ್ತಾ ವೇದಿಕೆಯನ್ನೆಲ್ಲಾ ಸುತ್ತಿ ಕೊನೆಗೆ ತನ್ನ ಪ್ರಿಯಕರ ತನಗೆ ಪ್ರೀತಿಯಿಂದ ಕೊಟ್ಟಿರುವ ಉಡುಗೊರೆಯನ್ನು ತನ್ನ ಕಿಮಾನೋ ಪದರಗಳಿಂದ ಹೊರಕ್ಕೆ ತೆಗೆದು ಕೈತುದಿಯಲ್ಲಿ ಹಿಡಿದು ಹಿಗ್ಗಿನಿಂದ ಪ್ರೇಕ್ಷಕರಿಗೆ ತೋರಿಸುತ್ತಾಳೆ. ಅದು ಸಿಂಗಪುರದ ಪಾಸ್‌ಪೋರ್ಟ್. ಆ ಕ್ಷಣ ಹಿನ್ನೆಲೆಯ ತೆರೆಯ ಮೇಲೆ ಸಿಂಗಪುರದ ಪ್ರಧಾನಿಗಳ ನಗುಮುಖದ ಭಾವಚಿತ್ರ ಮೂಡುತ್ತದೆ. ಸಿಂಗಪುರದ ಸಿಟಿಜನ್‌ಷಿಪ್ ಪಡೆಯಲು ಜನರು ಪಡುವ ಬವಣೆಯನ್ನು ಯಥಾವತ್ತಾಗಿ ಬಿಂಬಿಸಿದ ಆ ಚಿತ್ರಣಕ್ಕೆ ಇಡೀ ಸಭಾಗೃಹ ಒಕ್ಕೊರಲಿನಿಂದ ಕೂಗಿ ಹರ್ಷ ವ್ಯಕ್ತಪಡಿಸಿತು.

ನಾಟಕದ ಒಟ್ಟಾರೆ ಹರಹು ಸಿಂಗಪುರದ ದಿನನಿತ್ಯ ಸಮಸ್ಯೆಗಳನ್ನು ಕುರಿತದ್ದು. ಇಂತಹ ರಾಜಕೀಯವೆನ್ನಬಹುದಾದ ವಸ್ತುವನ್ನು ಬಹು ಸಮರ್ಥವಾಗಿ ಹಾಗೂ ಕಲಾತ್ಮಕವಾಗಿ ವೇದಿಕೆಗೆ ತಂದಿದ್ದು ನಾಟಕದ ನಿರ್ದೇಶಕ ಗ್ಲೆನ್ ಗೋಯ್. ನಾಟಕ ನಡೆದದ್ದು ಸಿಸ್ಟಿಕ್ ರಂಗಮಂದಿರದಲ್ಲಿ. ವಿನ್ಯಾಸದಲ್ಲಿ ಹಾಗೂ ಅಳವಡಿಸಬಹುದಾದ ಪ್ರೇಕ್ಷಕರ ಸಂಖ್ಯೆಯಲ್ಲಿ ಇದು ನಮ್ಮ ರಂಗಶಂಕರವನ್ನು ಬಹುವಾಗಿ ಹೋಲುತ್ತದೆ. ರಂಗಶಂಕರ ಅಂದ ತಕ್ಷಣ ಮಳೆಬರುತ್ತಿರುವ ಸಂಜೆ ಅಲ್ಲಿನ ಅಂಗಳದಲ್ಲಿ ಸಿಗುವ ಅಕ್ಕಿ ರೊಟ್ಟಿ, ಹಬೆಯಾಡುತ್ತಿರುವ ಬಿಸಿ ಬಿಸಿ ಕಾಫಿ ನೆನಪಿಗೆ ಬಂದು ಊರಿಗೆ ಹಿಂತಿರುಗುವ ಹಂಬಲ ಹೆಚ್ಚಾಯಿತು. ಒಟ್ಟಿನಲ್ಲಿ ಒಂದು ಬೆಚ್ಚಗಿನ ಅನುಭವ ಕೊಡುವ ನಾಟಕ ಕುಕ್ ಎ ಪಾಟ್ ಆಫ್ ಕರಿ.

**ಶಿವಕುಮಾರ್**

ಪಡುಕೋಣೆ ರಮಾನಂದರಾವ್ ಸ್ಮಾರಕ ಹಾಸ್ಯಲೇಖನ ಸ್ಪರ್ಧೆಯಲ್ಲಿ
ಮೆಚ್ಚುಗೆ ಪಡೆದ ಲೇಖನ

# ಹೊಸ ಜೀವ

- ಸು. ವಿಜಯಲಕ್ಷ್ಮಿ

**ಸು**ಶೀಲಮ್ಮನವರಿಗೆ ಯಾವುದೇ ದಿನ ಪತ್ರಿಕೆ, ವಾರ ಪತ್ರಿಕೆ, ಮಾಸ ಪತ್ರಿಕೆ ಕಂಡರೂ ಅದರಲ್ಲಿ ತಮ್ಮ ರಾಶಿ ಭವಿಷ್ಯವನ್ನು ಓದುವುದು ಅಭ್ಯಾಸವಾಗಿತ್ತು. ಬರೀ ಓದುವುದಷ್ಟೇ ಅಲ್ಲ, ಅದನ್ನು ಮಗಳು ಮತ್ತು ಗಂಡನಿಗೂ ಹೇಳುತ್ತಿದ್ದರು. ಆ ಬಗ್ಗೆ ಅವರಿಗೆ ಗೀಳು ಇಲ್ಲದಿದ್ದರೂ ಏನೋ ಒಂದು ರೀತಿಯ ಕುತೂಹಲ. ಅಂದು 25ನೇ ತಾರೀಖು ವಾರಪತ್ರಿಕೆಯೊಂದನ್ನು ನೋಡಿ, 'ರೀ, ನಮ್ಮ ಮನೆಗೆ ಈ ತಿಂಗಳ ಅಂತ್ಯದಲ್ಲಿ ಹೊಸ ಜೀವದ ಆಗಮನ ಅಂತ ಇದೆ ಕಣ್ರೀ. ಎಷ್ಟು ಸರಿಯಾಗಿದೆ ನೋಡಿ. ನಮ್ಮ ಶಾಂತಿ ಡೆಲಿವರಿಗೆ ಬಂದಿದ್ದಾಳೆ. ಈ ತಿಂಗಳ ಕೊನೆ ಅಂದರೆ ಮೂವತ್ತನೇ ತಾರೀಖಿಗೆ ಡೇಟ್ ಕೊಟ್ಟಿದ್ದಾರೆ. ಹೇಗೂ ಡೆಲಿವರಿ ಆಗುತ್ತೆ. ಆಗ ಭವಿಷ್ಯನೂ ನಿಜವಾಗುತ್ತೆ ಅಲ್ವೇನ್ರೀ?' ಎಂದರು ಗಂಡನ ಕಡೆ ನೋಡುತ್ತಾ.

ಅಲ್ಲೇ ಕುಳಿತಿದ್ದ ಶಾಂತಿ 'ಅಮ್ಮಾ ಪ್ರಪಂಚದಲ್ಲಿರುವ ಜನರಲ್ಲಿ ಎಷ್ಟೋ ಜನರ ರಾಶಿ, ನಿನ್ನ ರಾಶಿಯೇ ಆಗಿರುತ್ತೆ ಕಣಮ್ಮಾ. ಹಾಗಾದ್ರೆ ಅವರೆಲ್ಲರ ಮನೆಗೂ ಹೊಸ ಜೀವ ಬರುತ್ತಾ? ಕಾಗೆ ಕುಳಿತುಕೊಳ್ಳುವುದಕ್ಕೂ, ಕೊಂಬೆ ಮುರಿಯುವುದಕ್ಕೂ ಸರಿ ಹೋಯ್ತು, ಅನ್ನೋ ಹಾಗೆ ಆಗುತ್ತೆ ಅಷ್ಟೆ' ಎಂದಳು ನಗುತ್ತಾ.

'ನಾನೇನೂ ಸೀರಿಯಸ್ ಆಗಿ ಹೇಳ್ತಾ ಇಲ್ಲಾ ಕಣೇ. ಈ ಸಲದ ಭವಿಷ್ಯ ನಿಜ ಆಗುತ್ತೆ ಅಂತ ಹೇಳಿದೆ ಅಷ್ಟೆ'

ಅಲ್ಲೇ ಇದ್ದ ಸುಶೀಲಮ್ಮನ ಪತಿ ರಾಮರಾಯರು ''ಸುಮ್ಮನಿರು ಶಾಂತಿ. ನಿಮ್ಮಮ್ಮನಿಗೆ ಅದೊಂದು ರೀತಿಯ ಚಪಲ. ಅವಳು ಓದಿ ಹೇಳುತ್ತಾನೇ ಇರುತ್ತಾಳೆ. ಅದೂ ಅಲ್ಲದೆ ಯಾವುದಾದರೂ ಸ್ತೋತ್ರ ಪಠಿಸಿ, ಅಂತ ಇದ್ದರೆ ಅದನ್ನೂ ಮಾಡುತ್ತಾಳೆ. ಮಾಡಲಿ ಬಿಡು. ಅದರಿಂದ ನಮಗೇನೂ ತೊಂದರೆ ಇಲ್ಲವೆಂದು ನಾನೂ ಸುಮ್ಮನೆ ಇದ್ದೀನಿ'' ಎಂದರು.

'ನೀವು ಅಪ್ಪಮಗಳಿಗೆ ನನ್ನ ಕಂಡರೆ ಹಾಸ್ಯ ಮಾಡಿ ನಗೋಣ ಅನ್ನಿಸುತ್ತೆ. ಇನ್ನು ಮುಂದೆ ನಿಮ್ಮ ಹತ್ತಿರ ನಾನು ಆ ವಿಷಯ ಮಾತನಾಡುವುದೇ ಇಲ್ಲ' ಎಂದರು ಸುಶೀಲಮ್ಮ.

''ಅಲ್ಲ ಕಣಮ್ಮಾ, ನೀವು ಮಾಡುವುದೂ ಹಾಗೆ. ನನ್ನ ಮದುವೆ ನಿಶ್ಚಯವಾದ ಮೇಲೆ, ಕಲ್ಯಾಣ ಮಂದಿರ ಎಲ್ಲಾ ಬುಕ್ ಆಗಿತ್ತು. ಆಗ ನೀವು ಯಾವುದೋ ಮಾಸ ಪತ್ರಿಕೆ ಹಿಡಿದುಕೊಂಡು ಬಂದು 'ನೋಡೇ ನಿನ್ನ ರಾಶಿಯಲ್ಲಿ ವಿವಾಹ ಯೋಗ ಇದೆ, ಎಷ್ಟು ಸರಿಯಾಗಿ ಭವಿಷ್ಯ ಬರೆದಿದ್ದಾರೆ'' ಎಂದಿದ್ದೆ.

''ನೀನು ಹಿಂದಿನದೆಲ್ಲಾ ಕೆಣಕಿ ಸುಮ್ಮನೆ ನನ್ನ ರೇಗಿಸಬೇಡ ಶಾಂತಿ. ನನ್ನಿಂದ ನಿಮಗೇನಾದರೂ ತೊಂದರೆ ಆಗಿದೆಯಾ ಹೇಳು?'' ಎಂದರು ಸುಶೀಲಮ್ಮ ಸಿಟ್ಟಿನಿಂದ.

ವಾತಾವರಣ ಹದಗೆಡುತ್ತಿರುವುದನ್ನು ಕಂಡು ರಾಮರಾಯರು 'ಶಾಂತಿ ಹೋಗಮ್ಮ ನಮ್ಮ ಮೂರು ಜನಕ್ಕೂ ಅರ್ಧರ್ಧ ಕಪ್ ಕಾಫಿ ತೆಗೆದುಕೊಂಡು ಬಾ' ಎಂದರು.

ಶಾಂತಿ ಒಳಗೆ ಹೋದಮೇಲೆ 'ಏನೋ ಆ ಹುಡುಗಿ ತಮಾಷೆ ಮಾಡಿದ್ರೆ ಯಾಕೆ ಹಾಗೆ ರೇಗುತ್ತೀಯಾ ಸುಶೀಲ? ಇನ್ನೆಷ್ಟು ದಿನ ಅವಳು ನಮ್ಮ ಮನೆಯಲ್ಲಿ ಇರುತ್ತಾಳೆ ಹೇಳು. ಬಾಣಂತನ ಆದ ಮೇಲೆ ಹೋಗುತ್ತಾಳೆ. ಸುಮ್ಮನಿರಬಾರದಾ?' ಎಂದರು ರಾಮರಾಯರು.

'ಹಾಗಲ್ಲ ಕಣ್ರೀ ನಾನು ಹೇಳಿದ್ದು. ಶಾಂತಿಗೆ ಹೇಗೂ ಇಪ್ಪತ್ತೆಂಟಕ್ಕೆ ಡೇಟ್ ಕೊಟ್ಟಿದ್ದಾರೆ. ಅದಕ್ಕೂ ಪತ್ರಿಕೆಯಲ್ಲಿನ ಭವಿಷ್ಯಕ್ಕೂ ತಾಳೆ ಆಗುವ ಹಾಗಿದೆ ಅಂದೆ ಅಷ್ಟೇ' ಎಂದು ಸುಶೀಲಮ್ಮ ಹೇಳುತ್ತಿರುವಾಗಲೇ ಶಾಂತಿ ಕಾಫಿ ತೆಗೆದುಕೊಂಡು ಬಂದಳು.

ಶಾಂತಿಗೆ ಡಾಕ್ಟರ್ ಡೆಲಿವರಿಗೆ ಕೊಟ್ಟಿದ್ದ ದಿನಾಂಕ ಹತ್ತಿರ ಬಂದಂತೆ ಸುಶೀಲಮ್ಮನವರಂತೂ ಅವಳಿಗೆ ನಿದ್ರೆ ಮಾಡಲೂ ಕೂಡ ಬಿಡುತ್ತಿರಲಿಲ್ಲ. ನಿದ್ದೆ ಮಾಡುತ್ತಿರುವಾಗ ಎಬ್ಬಿಸಿ 'ಆರಾಮವಾಗಿದೀಯೇನೇ ಶಾಂತಿ?' ಎನ್ನುತ್ತಿದ್ದರು.

'ಅಮ್ಮ, ನೀನು ನಂಗೆ ನಿದ್ದೆ ಮಾಡಲೂ ಬಿಡಲ್ಲ ಕಣಮ್ಮ. ಏನಾದರೂ ವ್ಯತ್ಯಾಸವಾದರೆ ನಾನು ಹೇಳಲ್ಲವೇನಮ್ಮಾ?' ಎಂದಳು ಶಾಂತಿ.

'ಲೇ ಸುಶೀಲ, ಆ ಹುಡುಗಿಗೆ ಯಾಕೆ ಹಾಗೆ ಮಾಡ್ತೀಯೇ? ಸುಮ್ಮನೆ ಅವಳ ಪಾಡಿಗೆ ಅವಳನ್ನು ಬಿಟ್ಟು ಬಿಡು. ತಿಂದುಂಡು ಹಾಯಾಗಿ ಓಡಾಡಿಕೊಂಡಿರಲಿ' ಎಂದು ಹೆಂಡತಿಗೆ ರೇಗಿದರು ರಾಮರಾಯರು.

'ಹಾಗಲ್ಲ ಕಣ್ರಿ, ನಾನು ತಾಯಿಯಾದವಳು ಅವಾಗವಾಗ ವಿಚಾರಿಸಿಕೊಳ್ಳಬೇಕಾದದ್ದು ನನ್ನ ಕರ್ತವ್ಯ. ಇಲ್ಲದಿದ್ದರೆ ಅಳಿಯಂದಿರು, ಅವಳ ಅತ್ತೆ, ಮಾವ ಏನು ತಿಳಿದುಕೊಳ್ಳಲ್ಲ ಹೇಳಿ?'

'ಅಮ್ಮಾ, ನೀನು ಇಷ್ಟರಮಟ್ಟಿಗೆ ಜಾಣೆ ಆಗಿದೀಯಲ್ಲಾ, ಅದಕ್ಕೆ ನಂಗೆ ಸಂತೋಷವಾಗುತ್ತಾ ಇದೆ' ಎಂದಳು ಶಾಂತಿ ನಗುತ್ತಾ.

'ಯಾಕೆ ಹಾಗೆ ಮುಸಿ ಮುಸಿ ನಗ್ತೀಯಾ?'

'ಏನಿಲ್ಲಮ್ಮಾ, ನೀನು ಪತ್ರಿಕೆಗಳಲ್ಲಿ ಬರೋ ಭವಿಷ್ಯದ ಬಗ್ಗೆ ಹೇಳಿದರೆ ನಾನೂ, ಅಪ್ಪ ತಮಾಷೆ ಮಾಡ್ತೀವೀಂತ ಈ ರೀತಿ ಹೇಳುತ್ತಾ ಇದೀಯಲ್ಲಮ್ಮಾ. ಹೋಗ್ಲಿ ಬಿಡು. ಈಗ ನರ್ಸಿಂಗ್ ಹೋಂಗೆ ಚೆಕಪ್‌ಗೆ ಹೋಗಿ ಬರೋಣ ನಡಿ'

'ಬೇಗ ರೆಡಿಯಾಗು. ಇವತ್ತು ಆಗಲೇ ಮೂವತ್ತನೇ ತಾರೀಖು ಸಂಜೆ ಆಗಿದೆ. ನಾಳೆ ಮುಂದಿನ ತಿಂಗಳ ಒಂದನೇ ತಾರೀಖು. ಇವತ್ತು ರಾತ್ರೀನೇ ಹೆರಿಗೆ ಆದರೂ ಆಗಬಹುದು. ಇಷ್ಟು ಹೊತ್ತಿಗೆ ಹೆರಿಗೆ ಆಗಬೇಕಾಗಿತ್ತು' ಎಂದರು ಸುಶೀಲಮ್ಮ. ಅಪ್ಪ, ಮಗಳು ಇಬ್ಬರೂ ಸುಮ್ಮನೆ ನಕ್ಕರು.

ನರ್ಸಿಂಗ್ ಹೋಂಗೆ ಹೋದ ಮೇಲೆ ಸುಶೀಲಮ್ಮ ಡಾಕ್ಟರರ ಬಳಿ 'ಈ ತಿಂಗಳ ಮೂವತ್ತನೇ ತಾರೀಖು ಹೆರಿಗೆ ಆಗುತ್ತೆ ಅಂತ ಡೇಟ್ ಕೊಟ್ಟಿದ್ದಿರಿ ಡಾಕ್ಟ್ರೇ. ಇವತ್ತು ಮೂವತ್ತನೇ ತಾರೀಖು. ಇನ್ನೂ ಹೆರಿಗೆ ಆಗಲೇ ಇಲ್ಲವಲ್ಲಾ? ಅದಕ್ಕೆ ಚೆಕಪ್‌ಗೆ ಬಂದ್ವಿ' ಎಂದರು.

'ನಾವು ಒಂದು ಅಂದಾಜಿನ ಮೇಲೆ ಹೇಳಿರುತ್ತೀವಮ್ಮಾ ಹುಷಾರಾಗಿರಲಿ ಅಂತ. ಹೆಚ್ಚು ಕಮ್ಮಿ ಆಗೇ ಆಗುತ್ತೆ. ನೀವೇನೂ ಯೋಚನೆ ಮಾಡಬೇಡಿ. ನಿಮ್ಮ ಮಗಳು ಮತ್ತು ಮೊಮ್ಮಗು ಇಬ್ಬರೂ ಆರೋಗ್ಯವಾಗಿದ್ದಾರೆ' ಎಂದರು ಡಾಕ್ಟರ್.

ತಾಯಿ, ಮಗಳು ಇಬ್ಬರೂ ಮನೆಗೆ ಬಂದರು. 'ನಿನ್ನ ಯಜಮಾನರು ಬೆಂಗಳೂರಿನಿಂದ ಸಂಜೆ ನಾಲ್ಕೂವರೆ ಗಂಟೆ ಇಂಟರ್ ಸಿಟಿ ರೈಲಿಗೆ ಹೊರಟಿದ್ದಾರಂತೆ ಶಾಂತಿ. ಅವರಿಗೂ ಸೇರಿಸಿ ಅಡುಗೆ ಮಾಡಲು ಅಮ್ಮನಿಗೆ ಹೇಳು' ಎಂದರು ರಾಮರಾಯರು.

ಅಷ್ಟು ಹೊತ್ತಿಗೆ ಶಾಂತಿಯ ಗಂಡ ಸತೀಶನಿಂದ ಫೋನ್ ಬಂತು. 'ಟ್ರೈನ್ ಇವತ್ತು ಅರ್ಧ ಗಂಟೆ ತಡವಾಗಿ ಹೊರಟಿದೆ. ನಾನು ಶಿವಮೊಗ್ಗ ತಲುಪುವ ಹೊತ್ತಿಗೆ ರಾತ್ರಿ ಹನ್ನೊಂದು ಗಂಟೆಯಾಗಬಹುದು. ನೀವೆಲ್ಲರೂ ಊಟ ಮಾಡಿರಿ' ಎಂದು ಫೋನ್‌ನಲ್ಲಿ ಹೇಳಿದರು.

ಶಾಂತಿ ಗಂಡ ಫೋನ್ ಮಾಡಿದ ವಿಚಾರವನ್ನು ಅಪ್ಪ, ಅಮ್ಮನಿಗೆ ಹೇಳಿದಳು. ಎಲ್ಲರೂ ಒಬ್ಬರಿಗೊಬ್ಬರು 'ನೀನು ಊಟ ಮಾಡು ನಾನು ಕಾಯುತ್ತೇನೆ, ನೀನು ಊಟ ಮಾಡು ನಾನು ಕಾಯುತ್ತೇನೆ' ಎಂದು ಹೇಳಲು ಪ್ರಾರಂಭಿಸಿದರು. ಕೊನೆಗೆ ಊಟಕ್ಕೆ ಕರಿದ ಹಪ್ಪಳಗಳನ್ನು ತಿಂದು, ಶಾಂತಿಯ ಗಂಡ ಸತೀಶ ಬಂದ ನಂತರ ಎಲ್ಲರೂ ಒಟ್ಟಿಗೆ ಊಟ ಮಾಡುವುದೆಂದು ನಿರ್ಧರಿಸಿದರು.

'ಅಳಿಯಂದಿರು ಬರೋದು ಒಳ್ಳೆಯದೇ ಆಯ್ತು ಕಣೆ ಶಾಂತಿ. ನಾಳೆ, ನಾಡಿದ್ದು ಹೇಗೂ ಅವರಿಗೆ ರಜಾ ಇದೆ. ಅಷ್ಟರಲ್ಲಿ ಡೆಲಿವರಿ ಆದರೆ ಮಗು, ಬಾಣಂತಿಯನ್ನು ನೋಡಿಕೊಂಡು ಹೋಗುತ್ತಾರೆ' ಎಂದರು ಸುಶೀಲಮ್ಮ.

'ಅಮ್ಮಾ ನೀನು ಪದೇ ಪದೇ ಅದನ್ನೇ ಹೇಳಬೇಡ. ಗರ್ಭಿಣಿಯಾದವರು ಹಡೆಯದೇ ಇರುವ ಕೇಸ್ ಯಾವುದಾದರೂ ಇದೆಯಾ ಹೇಳು? ಅಂದ ಹಾಗೆ ಅಮ್ಮಾ, ಇವತ್ತಿಗೆ ನಿನ್ನ ಭವಿಷ್ಯ ಸುಳ್ಳಾಯಿತಲ್ಲಮ್ಮಾ?' ಎಂದಳು ಶಾಂತಿ ನಗುತ್ತಾ.

ಅಲ್ಲೇ ಇದ್ದ ರಾಮರಾಯರು 'ಲೇ ಸುಶೀಲ, ಆ ಹುಡುಗಿ ಆರಾಮವಾಗಿರುವುದಕ್ಕೆ ಬಿಡೆ ಸಾಕು. ನೀನು ಒಳಗೆ ಹೋಗಿ ಅಡುಗೆ ಮಾಡು' ಎಂದಾಗ, ಸುಶೀಲಮ್ಮ ಒಳಗೆ ಹೋದರು.

ಅಪ್ಪ, ಮಗಳು ಇಬ್ಬರೂ ಮಾತನಾಡುತ್ತಾ ಹೊರಗಡೆ ಜಗುಲಿಯ ಮೇಲೆಯೇ ಕುಳಿತರು. ಎಂಟೂವರೆಯ ಹೊತ್ತಿಗೆ ಸುಶೀಲಮ್ಮ ಅಡುಗೆ ಮುಗಿಸಿ, ಮೂವರಿಗೂ ಹಪ್ಪಳಗಳನ್ನು ಪ್ಲೇಟಿನಲ್ಲಿ ಹಾಕಿಕೊಂಡು ಬಂದರು. ಸುಶೀಲಮ್ಮ ಶಾಂತಿಯ ಮುಂದೆ ಹಪ್ಪಳದ ಪ್ಲೇಟ್ ಹಿಡಿದಾಗ ಶಾಂತಿಗೆ ಒಂದು ರೀತಿಯಾಯಿತು.

'ನನ್ನ ಮುದ್ದು ಅಮ್ಮಾ, ನಾನು ರೇಗಿದೆ ಅಂತ ಬೇಜಾರು ಮಾಡಿಕೊಂಡೆಯಾ? ಸುಮ್ಮನೆ ತಮಾಷೆ ಮಾಡಿದೆ ಕಣಮ್ಮಾ. ಎಲ್ಲಿ ಒಂದು ಸಲ ನಗು ನೋಡೋಣ?' ಎಂದಳು ಶಾಂತಿ.

'ಮಾಡೋದು ಮಾಡಿ ಈಗ ಸಮಾಧಾನ ಮಾಡಕ್ಕೆ ಬೇರೆ ಬರ್ತ್ತಾಳೆ. ನೋಡು ಶಾಂತಿ ದಿನ ತುಂಬಿದ ಮೇಲೆ ಕಾದು ಊಟ ಮಾಡಬಾರದು. ಈಗ ನೀನು ಊಟ ಮಾಡು. ನಾನು ಮತ್ತು ನಿಮ್ಮ ಅಪ್ಪ ಅಳಿಯಂದಿರು ಬಂದ ಮೇಲೆ ಊಟ ಮಾಡ್ತೀವಿ' ಎಂದರು ಸುಶೀಲಮ್ಮ.

'ಇನ್ನೇನು ಸ್ವಲ್ಪ ಹೊತ್ತು ಬಂದು ಬಿಡ್ತಾರೆ ಬಿಡಮ್ಮಾ. ಅಷ್ಟು ಹೊತ್ತಿಗೆ ಒಂದೆರೆಡು ಸೀರಿಯಲ್ ನೋಡಿದರಾಯಿತು. ಒಟ್ಟಿಗೆ ಊಟ ಮಾಡೋಣ' ಎಂದು ಶಾಂತಿ ಹೇಳಿದಾಗ, ಎಲ್ಲರೂ ಎದ್ದು ದೂರದರ್ಶನದ ಧಾರಾವಾಹಿ ನೋಡಲು ಒಳಗೆ ಹೋದರು.

ಶಾಂತಿಯ ಗಂಡ ಸುರೇಶ ಮನೆಗೆ ಬರುವಾಗ ಆಗಲೇ ಹನ್ನೊಂದು ಗಂಟೆಯಾಗಿತ್ತು. ಉಭಯ ಕುಶಲೋಪರಿ ನಂತರ ಎಲ್ಲರೂ ಊಟ ಮಾಡಿದರು.

ಸುಶೀಲಮ್ಮ 'ಡಾಕ್ಟರ್ ಹೇಳಿದ ಪ್ರಕಾರ ಆದ್ರೆ ಇವತ್ತಿಗೆ ಡೆಲಿವರಿ ಆಗಿ ನಾಲ್ಕು ದಿನ ಆಗಬೇಕಾಗಿತ್ತು. ಸಂಜೆ ಮತ್ತೆ ನರ್ಸಿಂಗ ಹೋಂಗೆ ಹೋಗಿದ್ದೆವು. ಏನೂ ಸಮಸ್ಯೆ ಇಲ್ಲ ಆರಾಮವಾಗಿದ್ದಾಳೆ ಅಂತ ಡಾಕ್ಟರ್ ಹೇಳಿದ್ದಾರೆ' ಅಂತ ಅಳಿಯಂದಿರಿಗೆ ವರದಿ ಒಪ್ಪಿಸಿದರು.

ಊಟವಾದ ಮೇಲೆ ಶಾಂತಿ ಗೇಟ್‌ಗೆ ಬೀಗ ಹಾಕಲು ಬಂದಳು. ಗೇಟ್‌ನ ಬಳಿ ಬಂದವಳೇ 'ಅಮ್ಮಾ, ಬೇಗ ಬಾ ಇಲ್ಲಿ, ನೋಡು ಬಾ' ಎಂದು ಜೋರಾಗಿ ಕೂಗಿದಳು. ಸುಶೀಲಮ್ಮ, ರಾಮರಾಯರು, ಸುರೇಶ ಎಲ್ಲರೂ ಗಾಬರಿಯಿಂದ ಹೊರಗೆ ಬಂದರು. ಗೇಟಿನ ಬಳಿ ಶಾಂತಿ ನಗುತ್ತಾ ನಿಂತಿದ್ದಳು.

'ಏನಾಯ್ತೇ ಶಾಂತಿ, ಯಾಕೆ ಹಾಗೆ ಕೂಗಿಕೊಂಡೆ? ಈಗ ನೋಡಿದ್ರೆ ನಗ್ತಾ ಇದ್ದೀಯಲ್ಲೆ? ಏನು ಹೇಳೆ' ಎಂದರು ಸುಶೀಲಮ್ಮ ಆತಂಕದಿಂದ.

'ನನ್ನನ್ನೇನು ನೋಡ್ತೀಯಮ್ಮಾ? ಇಲ್ಲಿ ನೋಡು' ಎಂದು ಗೇಟಿನ ಬಳಿ ಕಣ್ಣು ಪಿಳಿ, ಪಿಳಿ ಬಿಟ್ಟುಕೊಂಡು ಕುಳಿತಿದ್ದ ಮುದ್ದಾದ ನಾಯಿಮರಿಯನ್ನು ಎತ್ತಿಕೊಂಡು ಹೇಳಿದಳು. ಆಗ ಎಲ್ಲರಿಗೂ ನಗು ಬಂತು.

ಛಳಿಗೆ ನಾಯಿ ಮರಿ ನಡುಗುತ್ತಾ ಇತ್ತು. ಸುಶೀಲಮ್ಮ ಒಳಗೆ ಹೋಗಿ ಅಲಗವಾದ ಬಟ್ಟಲಿನಲ್ಲಿ ಸ್ವಲ್ಪ ಬಿಸಿಯಾದ ಹಾಲನ್ನು ತಂದು ಅದರ ಮುಂದೆ ಇಟ್ಟರು. ಎಲ್ಲರೂ ಅದನ್ನೇ ನೋಡುತ್ತಾ ನಿಂತರು. ನಾಯಿ ಮರಿ, ನಿಧಾನವಾಗಿ ಹಾಲು ಕುಡಿದು ಎಲ್ಲರ ಕಡೆ ಕೃತಜ್ಞತೆಯ ನೋಟ ಬೀರಿ ಸುಮ್ಮನೆ ಕುಳಿತುಕೊಂಡಿತು.

'ಗೇಟಿಗೆ ಬೀಗ ಹಾಕಿಕೊಂಡು ಬಂದು ಎಲ್ಲರೂ ಮಲಗಿ, ಆಗಲೆ ಗಂಟೆ ಹನ್ನೊಂದು ಮುಕ್ಕಾಲಾಗಿದೆ' ಎಂದು ಸುಶೀಲಮ್ಮ ಒಳಗೆ ಹೋದರು.

ನಾಯಿ ಮರಿ ಕುಳಿತ ಜಾಗದಿಂದ ಅಲ್ಲಾಡುವ ಹಾಗೆ ಕಾಣಲಿಲ್ಲ. ಎಲ್ಲರೂ ಒಳಗೆ ಬರಲು ಹೊರಟಾಗ ಅದೂ ಇವರನ್ನು ಹಿಂಬಾಲಿಸಿತು.

‘ಅಪ್ಪಾ ಈ ನಾಯಿ ಮರಿ ತುಂಬಾ ಮುದ್ದಾಗಿದೆ. ನಮ್ಮನೇಲೆ ಇರಲಿ ಬಿಡಿ ಅಪ್ಪಾ’ ಎಂದಳು ಶಾಂತಿ.

ಶಾಂತಿಯ ಗಂಡ ಸತೀಶನೂ ‘ಇರಲಿ ಬಿಡಿ ಮಾವ. ಅದರ ಮುಖ ನೋಡಿ ಎಷ್ಟು ದೈನ್ಯದಿಂದ ಬೇಡಿಕೊಳ್ಳುವ ಹಾಗಿದೆ’ ಎಂದರು.

ಎಲ್ಲರೊಂದಿಗೆ ನಾಯಿ ಮರಿ ಮನೆ ಪ್ರವೇಶ ಮಾಡಿತು. ಶಾಂತಿ ಒಳಗೆ ಹೋಗಿ ಒಂದು ಬೆಡ್‌ಶೀಟ್ ತಂದು ವರಾಂಡದಲ್ಲಿ ನಾಯಿ ಮರಿಗೆ ಮಲಗಲು ವ್ಯವಸ್ಥೆ ಮಾಡಿದಳು.

‘ಲೇ ಶಾಂತಿ, ಅದನ್ಯಾಕೆ ಒಳಗೆ ಬಿಟ್ಟುಕೊಂಡಿರಿ? ನಾಯಿ ಮರಿಯೇನೋ ಮುದ್ದಾಗಿದೆ. ಇನ್ನು ಇದೂ ಈ ಮನೆ ಮೆಂಬರ್ ಆಯ್ತಾ?’ ಎಂದರು ಸುಶೀಲಮ್ಮ.

ಆಗ ರಾಮರಾಯರು ‘ಇರಲಿ ಬಿಡೆ ಸುಶೀಲ. ಬೆಳಿಗ್ಗೆ ಹೊತ್ತು ಹೊರಗಡೆ ಇರುತ್ತೆ. ಅದರಿಂದ ನಮಗೇನು ತೊಂದರೆ. ಏನೋ ಒಂದು ತುತ್ತು ನಾವು ತಿಂದಿದ್ದನ್ನೇ ಅದಕ್ಕೆ ಹಾಕಿದರಾಯ್ತು’ ಎಂದರು.

ನಾಯಿ ಮರಿಗೆ ಮಲಗಲು ವ್ಯವಸ್ಥೆಯಾಯಿತು. ಎಲ್ಲರೂ ಮಲಗಲು ಹೊರಟರು. ಆಗ ಶಾಂತಿ ಏನೋ ನೆನಪಿಸಿಕೊಂಡವಳಂತೆ ‘ಅಮ್ಮ ನಿನ್ನ ಭವಿಷ್ಯ ನಿಜವಾಯಿತು ಕಣಮ್ಮಾ’ ಎಂದಳು.

‘ಏನೇ ಅದು ನನ್ನ ಭವಿಷ್ಯ’ ಎಂದರು ಸುಶೀಲಮ್ಮ.

‘ಇನ್ನೂ ಹನ್ನೆರೆಡು ಗಂಟೆ ಆಗಲು ಐದು ನಿಮಿಷ ಇದೆ ಕಣಮ್ಮಾ. ಈ ತಿಂಗಳ ಲೆಕ್ಕಕ್ಕೆ ಬಿತ್ತು. ಅದೇ ನಿನ್ನ ಪತ್ರಿಕೆಯ ಭವಿಷ್ಯದ ಪ್ರಕಾರ ಈ ತಿಂಗಳಲ್ಲಿ ಹೊಸ ಜೀವ ಬರುತ್ತೆ ಅಂದಿದ್ದೆಯಲ್ಲಾ. ನೋಡು ಹೊಸ ಜೀವ ಬಂದಿದೆ. ನಾಳೆ ಸ್ವೀಟ್ ಮಾಡು’ ಎಂದು ಶಾಂತಿ ಹೇಳಿದಾಗ ಎಲ್ಲರೂ ನಕ್ಕರು.

---

## ಬುದ್ಧಿವಂತರು ಹೀಗೂ ಇರುತ್ತಾರೆ

(1) ಒಬ್ಬ ಕೋಳಿಗೆ ಬಿಸಿನೀರು ಕುಡಿಸುತ್ತಿದ್ದನಂತೆ. ಯಾಕೆ ಅಂತ ಕೇಳಿದರೆ ನನಗೆ ಬಿಸಿ ಮೊಟ್ಟೆ ಬೇಕು ಅಂದನಂತೆ.

(2) ಒಬ್ಬ ಕಂಟ್ರಾಕ್ಟರು ತನ್ನ ಕೆಲಸದವರಿಗೆ ಹೀಗೆ ಹೇಳಿದನಂತೆ ಗುಂಡಿ ತೋಡಿದ ಮಣ್ಣನ್ನು ಅಲ್ಲಿ ಇಲ್ಲಿ ಬಿಸಾಕಬೇಡಿ. ಇನ್ನೊಂದು ಗುಂಡಿ ತೋಡಿ ಅದರಲ್ಲಿ ಹಾಕಿ

# ಸಂಶೋಧನೆಯ ಸುಳಿಯಲ್ಲಿ

**- ಕೃಷ್ಣ ಸುಬ್ಬರಾವ್**

**ಸಂ**ಶೋಧನೆಯ ಸುಳಿಯಲ್ಲಿ ಸಂಶೋಧಕ ಸಿಕ್ಕಿಹಾಕಿಕೊಳ್ಳುವುದರ ಬಗ್ಗೆ ನನಗೆ ಕಿಂಚಿತ್ತೂ ಕಾಳಜಿಯಿರಲಿಲ್ಲ. ಏಕೆಂದರೆ ಅದು ಅವನೇ ಆಯ್ಕೆ ಮಾಡಿಕೊಂಡದ್ದು. ಸಂಶೋಧನೆಯ ಸುಳಿಯಲ್ಲಿ ಸಿಕ್ಕಿ ಒದ್ದಾಡುವ ಜನಸಾಮಾನ್ಯನ ಬಗ್ಗೆ ನನಗೆ ಹೆಚ್ಚು ಆತಂಕ. ತನ್ನ ಪಾಡಿಗೆ ತಾನು ಬದುಕುತ್ತಿರುವ ಜೀವಿಗೆ ಹೊಸ ಆವಿಷ್ಕಾರದಿಂದ ಗೊಂದಲದ ಗೂಡಿನಲ್ಲಿ ನರಳುವ ಸ್ಥಿತಿ ಬರುತ್ತದೆ ಎಂಬುದು ನನ್ನ ಇತ್ತೀಚಿನ ಸಂಶೋಧನೆ ಸ್ಪಷ್ಟಪಡಿಸುತ್ತದೆ. ಓದಿದರೆ ನಿಮಗೆ ಅರ್ಥವಾಗುತ್ತದೆ.

ಅಳುವಿನಿಂದಲೇ ಅಳು ನಿಲ್ಲಿಸಬಹುದೆಂದು ಮಕ್ಕಳ ಅಳುವನ್ನು (ತುಂಬಾ ಚಿಕ್ಕ ಮಕ್ಕಳು) ನಿಲ್ಲಿಸುವ ಸುಲಭೋಪಾಯದ ಸುದ್ದಿಯೊಂದು ಬಹಳ ವರ್ಷಗಳ ಹಿಂದೆಯೇ ಪೇಪರ್‌ಗಳಲ್ಲಿ ಪ್ರಕಟವಾಗಿತ್ತು. ಮಕ್ಕಳ ಅಳುವನ್ನು ನಿಲ್ಲಿಸಲು ಹೈರಾಣಾಗಿದ್ದವರೆಲ್ಲರಿಗೂ ಅದು ಸಿಹಿಸುದ್ದಿಯಾಯಿತು. ಪೇಪರ್‌ಗಳ ದಾಖಲೆ ಮಾರಾಟವಾಗಿ (ಆ ಸುದ್ದಿ ಬಂದ ಪೇಪರುಗಳು ಮಾರಾಟವಾಗಿದ್ದು) ಗಿನ್ನಿಸ್ ದಾಖಲೆ ಸೇರಿತ್ತು. ಮುಳ್ಳಿನಿಂದಲೇ ಮುಳ್ಳನ್ನು ತೆಗೆಯುವ ಹಾಗೆ ಹೊಸ ಸಂಶೋಧನೆಯ ಪ್ರಕಾರ ಒಂದು ಮಗುವಿನ ಅಳುವನ್ನು ರೆಕಾರ್ಡ್ ಮಾಡಿ ಅದು ಅತ್ತಾಗ ಅದಕ್ಕೆ (ಮಗುವಿಗೆ) ಕೇಳಿಸಿದರೆ ಅದು ತಕ್ಷಣ ಅಳು ನಿಲ್ಲಿಸುತ್ತೆಂಬುದು ಸಂಶೋಧನೆಯಾಗಿತ್ತು. ಎಲ್ಲರ ಮನೆಯಂತೆ ನಮ್ಮನೆಯಲ್ಲೂ ಆಗ ತಾನೇ ಹುಟ್ಟಿದ ಮಗು ರಾತ್ರಿಯೆಲ್ಲಾ ಅಳುತ್ತಿತ್ತು. ಬೆಳಗ್ಗೆ ಎಲ್ಲಾ ತಾಯಿ ಸುಧಾರಿಸಿ ಸುಸ್ತಾಗುತ್ತಿದ್ದುದರಿಂದ ರಾತ್ರಿ ಪಾಳಿ ನನ್ನದಾಗಿತ್ತು. ನಾನು ಸಂಶೋಧನೆಯ ಉಪಯೋಗ ಪಡೆಯಲು ಒಂದು ಹೊಸ ಟೇಪ್ ರೆಕಾರ್ಡರ್ ಕೊಂಡುಕೊಂಡೆ. ಅಳುವನ್ನು ರೆಕಾರ್ಡ್ ಮಾಡಲು ಕಾದರೆ ಮಗು ಎಷ್ಟೊತ್ತಾದರೂ ಅಳಲೇ ಇಲ್ಲ. ಅದನ್ನು ಚಿವುಟಿ ಅಳಿಸಿ ರೆಕಾರ್ಡ್ ಮಾಡಿದ್ದಾಯಿತು. ಮಧ್ಯರಾತ್ರಿ ಎದ್ದು ಕಷ್ಟಪಟ್ಟು ಟೇಪ್ ಹುಡುಕಿ ಹಾಕುವಷ್ಟರಲ್ಲಿ ಕರೆಂಟು ಕೈ ಕೊಡುತ್ತಿತ್ತು. ಕರೆಂಟ್ ಬರುವಷ್ಟರಲ್ಲಿ ಮಗು ಅತ್ತು ಅತ್ತು ಗಂಟಲು ಒಣಗಿ ಮಲಗಿ ಬಿಡುತ್ತಿತ್ತು. ಹೀಗಾಗಿ ಬಹಳ ದಿನಗಳವರೆಗೂ ಮಗುವಿನ ಅಳುವನ್ನು ಟೇಪ್ ರೆಕಾರ್ಡರಲ್ಲಿನ ಅದರ ಅಳುವಿನ ಧ್ವನಿಯಿಂದಲೇ ನಿಲ್ಲಿಸಲಾಗಲಿಲ್ಲ.

**ಸಂಶೋಧನೆಗಳು ಹೀಗೂ ಆಗಬಹುದೇ**

ನಮ್ಮನೆ ಎದುರು ಮನೆಯವರಿಗೆ ನಮ್ಮ ಹೊಸ ಪ್ರಯೋಗ ತಿಳಿದು ತಾವು ಸಂಶೋಧನೆಯ ಉಪಯೋಗಪಡಿಸಿಕೊಳ್ಳಲು ನಮ್ಮ ಮನೆ ಟೇಪ್ ರೆಕಾರ್ಡರನ್ನು ಎರವಲು ಪಡೆದರು. ಆದರೆ ಅವರು ಯಶಸ್ವಿಯಾಗಲು ಕೆಲವು ತಾಂತ್ರಿಕ ತೊಂದರೆಗಳಿದ್ದವು. ನಮ್ಮ ಎದುರು ಮನೆಯಲ್ಲಿ ಇದ್ದುದು ಅವಳಿ ಜವಳಿ ಮಕ್ಕಳು. ಆಯಾ ಮಕ್ಕಳ ಧ್ವನಿಯನ್ನು ಆಯಾ ಮಕ್ಕಳಿಗೇ ಕೇಳಿಸಬಹುದಾದರೂ ಒಟ್ಟಿಗೇ ಅತ್ತಾಗ 'ಜೋಡಿ ಓಲಗ'ದ ಧ್ವನಿ

ಮುದ್ರಿಕೆ ಹಾಕಬೇಕಾ ಎಂಬ ಜಿಜ್ಞಾಸೆ. ಒಂದು ವೇಳೆ ಹಾಗೆ ಮಾಡಿದರೂ ಆ ಪುಟ್ಟ ಮಕ್ಕಳು ತಮ್ಮ ತಮ್ಮ ಧ್ವನಿಯನ್ನು ಕಂಡುಹಿಡಿಯಬಲ್ಲದೋ? ತನ್ನ ಧ್ವನಿಯೊಂದಿಗೆ ಇನ್ನೊಂದು ಮಗುವಿನ ಧ್ವನಿಯಿದ್ದಾಗ ಮತ್ತಷ್ಟು ಜೋರಾಗಿ ಅಳುವುದಕ್ಕೆ ಪ್ರಾರಂಭಿಸಿಬಿಟ್ಟರೆ ಏನು ಗತಿ? ಹೀಗೆಲ್ಲಾ ಎದ್ದ ಹೊಸ ಸಮಸ್ಯೆಗಳಿಗೆ ಸಂಶೋಧನಕಾರರು ಪರಿಹಾರ ಒದಗಿಸಲು ಸಹಾಯಮಾಡಿದ್ದು ಎಡವಟ್ಟಾಯಿತು. ಈ ಗಲಾಟೆಯಲ್ಲಿ ನಮ್ಮನೆಯಿಂದ ತೆಗೆದುಕೊಂಡು ಹೋದ ಟೇಪ್ ರೆಕಾರ್ಡರ್ ವಾಪಸ್ ತರಲು ನಾವು ಹೆಣಗಬೇಕಾಯಿತು. ಕಡೆಗೂ ಒಂದು ದಿನ ಟೇಪ್ ರೆಕಾರ್ಡರ್ ವಾಪಸ್ಸಾಯಿತು. ಆದರೆ ಅದು ಸುಸ್ಥಿತಿಯಲ್ಲಿರಲಿಲ್ಲ.

ಕೆಲಸದಲ್ಲಿ ಪ್ರತಿ ವರ್ಷ ಇನ್‌ಕ್ರಿಮೆಂಟ್ ಪಡೆಯುವುದು ಕಾರ್ಮಿಕರ ಹಕ್ಕು. ಇಂತಿಷ್ಟೆ ಹೆಚ್ಚಳವೆಂದು ನಮ್ಮ ಕಾಲದಲ್ಲಿ ಮೊದಲೇ ನಿರ್ಧಾರವಾಗುತ್ತಿತ್ತು. (ಮಾಲೀಕರು ನೌಕರರ ಒಪ್ಪಂದದನುಸಾರವಾಗಿ) ಇನ್ನು ಪ್ರಮೋಷನ್, ಸೀನಿಯಾರಿಟಿ ಪ್ರಕಾರವಾಗುತ್ತಿತ್ತು. ಆದರೆ ಈಗ ಕಾಲ ಬದಲಾಗಿದೆ. ಎಲ್ಲವೂ ಬದಲಾಗಿದೆ. ಈಗ ಮಾಡುವ ಕೆಲಸದ ಮೇಲೆ ಇನ್‌ಕ್ರಿಮೆಂಟ್ ಹಾಗೂ ಪ್ರಮೋಷನ್. ಸಂಬಳ ಹೆಚ್ಚಿಸಲು ಒಂದು ವರ್ಷವೇ ಕಾಯಬೇಕಾಗಿಲ್ಲ ಕೆಲವರಿಗೆ. ಮತ್ತೆ ಕೆಲವರಿಗೆ ವರ್ಷಗಳಾದರೂ ಲಭಿಸುವುದಿಲ್ಲ. ಊಹೆಗೂ ಮೀರಿದಷ್ಟು ಸಂಬಳ ಜಾಸ್ತಿಯಾಗುವುದೂ ಉಂಟು. ಖಾಸಗೀ ವಲಯದಲ್ಲಿ ಬಾಸ್‌ಗೆ ಆದ ಖುಷಿಯಿಂದ ಕೆರಿಯರ್ ಮುಂದಕ್ಕೆ ಹೋಗುತ್ತದೆ. ನೀಲಿಗಣ್ಣಿನ ಹುಡುಗನಾದರಂತೂ (ಬ್ಲೂ ಐಡ್ ಬಾಯ್) ಅವನನ್ನು ಹಿಡಿಯುವವರೇ ಇರುವುದಿಲ್ಲ. ಕೆಲಸಕ್ಕಿಂತ ಬೇರೆ ವಿಷಯಗಳಲ್ಲಿ ಬಾಸನ್ನು ಒಲಿಸಿಕೊಳ್ಳುವ ಜಾಣರಿದ್ದರಂತೂ ಯಶಸ್ಸಿನ ಏಣಿಯನ್ನು ಸರಸರನೆ ಹತ್ತುತ್ತಲೇ ಇರುತ್ತಾರೆ. ಬಾಸ್ ನಾಯಿಯನ್ನು ಮುದ್ದಿಸುವುದು, ಬಾಸ್‌ನ ಜೋಕುಗಳಿಗೆ ಎಲ್ಲರಿಗಿಂತ ಮೊದಲೇ ಹಾಗೂ ಎಲ್ಲರಿಗಿಂತ ಜೋರಾಗಿ ನಗುವುದು ಮುಂತಾದ ಸೂತ್ರಗಳ ಸಹಾಯದಿಂದ ಕೆಲವರು ಯಶಸ್ವಿಯಾಗುವುದು ಹಳೇ ಮಾತು. ಇತ್ತೀಚಿನ ಒಂದು ಸಂಶೋಧನೆಯ ಪ್ರಕಾರ ಬಾಸ್‌ಗೆ ಹುಟ್ಟುವ ಮೊದಲ ಮಗು ಹೆಣ್ಣಾಗಿದ್ದ ಪಕ್ಷದಲ್ಲಿ ಕೆಲಸಗಾರರ ಸಂಬಳ ಜಾಸ್ತಿಯಾಗುತ್ತದೆ ಎಂದು ಅಮೆರಿಕಾ ಆರ್ಥಿಕ ಸಂಸ್ಥೆಯೊಂದರಲ್ಲಿ ಮಾಡಿದ ಸಂಶೋಧನಾ ವರದಿ ತಿಳಿಸಿದೆ. ಇದಕ್ಕೆ ಕಾರಣವನ್ನು ವಿಶ್ಲೇಷಿಸುತ್ತಾ ಹುಟ್ಟುವ ಮಗು ಹೆಣ್ಣಾಗಿದ್ದರೆ ಅದೃಷ್ಟ ಎಂಬ ನಂಬಿಕೆ. ಭಾರತದಲ್ಲಂತೂ ಶುಕ್ರವಾರ ಜನಿಸಿದ ಹೆಣ್ಣು ಲಕ್ಷ್ಮಿಯೆಂದೇ ಭಾವಿಸಲಾಗುವುದು. ಆದರೆ ತಮ್ಮ ಕೆಲಸಗಾರರಿಗೆ ಸಂಬಳ ಜಾಸ್ತಿಮಾಡುವ ಬದಲು ಕಮ್ಮಿ ಮಾಡುತ್ತಾರೋ ಏನೋ. ಈ ವಿಷಯವಾಗಿ ಯಾವ ಸಂಶೋಧನೆಯೂ ಧೃಡಪಡಿಸಿಲ್ಲ.

ಪತ್ರಿಕೆ ಓದುವ ಕೆಟ್ಟ ಅಭ್ಯಾಸ ನನ್ನದು. ನನಗಿಷ್ಟವಾದ ಹಾಗೂ ಉಪಯೋಗಕ್ಕೆ ಬರುವಂತಹ ಸುದ್ದಿಗಳನ್ನು ಆರಿಸಿ ಓದುತ್ತೇನೆ. ಮ್ಯಾಚ್ ಫಿಕ್ಸಿಂಗ್ ಷುರುವಾದ ಮೇಲೆ ನಾನು ಮೊದಲು ನೋಡುತ್ತಿದ್ದ ಪತ್ರಿಕೆಯ ಕೊನೆ ಪುಟಗಳನ್ನು ನೋಡುವುದನ್ನೂ ಬಿಟ್ಟಿದ್ದೇನೆ. ಈಗಿನ ನನ್ನ ಏಕೈಕ ಆಯ್ಕೆಯೆಂದರೆ ಹೊಸ ಹೊಸ ಸಂಶೋಧನೆಯ ವರದಿಗಳು. ಒಳ್ಳೆ

ಮಾಹಿತಿಯೊಂದಿಗೆ ಒಳ್ಳೆ ಮನರಂಜನೆಯನ್ನೂ ನೀಡುತ್ತದೆ. ಹಾಸ್ಯದಲ್ಲಿ ಏನಾದರೂ ಸಂಶೋಧನೆ ನಡೆಸಬೇಕೆಂಬ ನನ್ನ ಬಹಳ ದಿನದ ಆಸೆ ಈಗ ಬದಲಾಗಿದೆ. ನಾನು ಈಗ ''ಸಂಶೋಧನೆ''ಯಲ್ಲಿ ಹಾಸ್ಯ ಎಂಬ ಪ್ರೌಢ ಪ್ರಬಂಧ ಬರೆಯಲು ತಯಾರು ಮಾಡುತ್ತಿದ್ದೇನೆ. ನಮ್ಮ ಕೈಯಲ್ಲಿ ಏನೂ ಸಾಧ್ಯವಿಲ್ಲ ಎಂದು ಕೈ ಚೆಲ್ಲಿ ಕುಳಿತಿದ್ದಾಗ 'ನಿಮ್ಮ ಅಂಗೈಯಿಂದಲೇ ನಿಮ್ಮ ಮೊಬೈಲ್ ಛಾರ್ಜ್ ಮಾಡಬಹುದೆಂಬ ಸುದ್ದಿ ಬಂದರೆ ಜೀವನೋತ್ಸಾಹ ಉಕ್ಕುವುದಿಲ್ಲವೇ?' ನಮ್ಮ ಹಸ್ತವೇ ನಮ್ಮ ಮೊಬೈಲ್ ಆಗುವ ದಿನವೂ ದೂರವಿಲ್ಲ ಎಂಬ ಇನ್ನೊಂದು ಸಂಶೋಧನೆಯ ವರದಿ ಬಂದಿದೆ. ಇದರಿಂದ ಇನ್ನೊಂದು ಹೆದರಿಕೆಯೂ ಆಗಿದೆ. ನಮ್ಮ ಕೈಯನ್ನೇ ಕತ್ತರಿಸಬಹುದೆಂಬ ಭಯ ಬರುವುದಿಲ್ಲವೇ?

ನನಗೆ ಪರಿಚಯದವರೊಬ್ಬರಿಗೆ ಒಂದು ಸಮಸ್ಯೆ ಬಂದಿದೆ. ಇದ್ದಕ್ಕಿದ್ದ ಹಾಗೆ ಬಿದ್ದುಬಿಡ್ತಾರೆ. ಕಾರಣ ತಿಳಿಯಲು ಬೇಕಾದಷ್ಟು ಸ್ಕ್ಯಾನ್ ಆಯಿತು. ಸರಿಯಾದ ಕಾರಣ ಯಾವ ವೈದ್ಯರೂ ತಿಳಿಸಿಲ್ಲ. ಆದರೆ ಒಬ್ಬ ವೈದ್ಯರು ಹೇಳಿದ್ದು ಏನೆಂದರೆ ನೋಡಿ ವಿದ್ಯುತ್ ಷಾಕ್ ಷಾರ್ಟ್ ಸರ್ಕ್ಯೂಟ್‌ನಿಂದ ಆದಂತೆ ಅವರಿಗೆ ಆಗುತ್ತೆ. ಸ್ವಲ್ಪ ಸಮಯದ ನಂತರ ಮತ್ತೆ ಮಾಮೂಲಿನಂತೆ ಆಗುತ್ತಾರೆ ಅಂತ. ನಮ್ಮ ದೇಹದಲ್ಲೂ ವಿದ್ಯುತ್ ಉತ್ಪಾದನೆಯಾಗುವಂತಾದರೆ ನಮ್ಮ ರಾಜ್ಯದ ಎಷ್ಟೋ ಸಮಸ್ಯೆಗಳು ನಿವಾರಣೆಯಾಗುತ್ತದೆ ಎಂಬ ದುರಾಸೆ ನನಗೆ. ಅನೇಕ ಜನರು ನಮ್ಮ ಮಾತಿನಿಂದ ನಡವಳಿಕೆಗಳಿಂದ ನಮಗೆ 'ಷಾಕ್' ಕೊಡುವುದನ್ನೂ ನಾವು ನೋಡುತ್ತಿರಬೇಕಾದರೆ ನಾನು ನಮ್ಮ ದೇಹದಲ್ಲಿ 'ಷಾಕ್' ಕೊಡುವ ಶಕ್ತಿಯಿದೆ ಎಂದು ಖಂಡಿತ ನಂಬುತ್ತೇನೆ.

ನಮ್ಮ ಬೆವರಿನಿಂದ ಕ್ಷಯರೋಗವನ್ನು ವಾಸಿಮಾಡಿಕೊಳ್ಳಬಹುದೆಂಬ ಸುದ್ದಿಯೊಂದು ಬಂದಿದೆ. ಬೆವರಿನಲ್ಲಿ ಆ್ಯಂಟಿಬಯೋಟಿಕ್ ಗುಣವಿದೆಯಂತೆ. ಬೆವರಿಗೆ ಬೆಲೆಯಿಲ್ಲ ಎಂಬ ಮಾತು ಇನ್ನು ಮುಂದೆ ಸುಳ್ಳಾದಂತಾಯಿತು. ಬೆವರನ್ನು ನೇರವಾಗಿ ಫಾರ್ಮಸಿ ಕಂಪನಿಗೆ ಮಾರಲು ನಮ್ಮ ಫಾರ್ಮರ್ಸ್ (ರೈತರು) ಪ್ರಾರಂಭಿಸಿಬಿಟ್ಟರೆ ಈಗಾಗಲೇ ಷಾರ್ಟೇಜ್ ಆಗಿರುವ ಧವಸ ಧಾನ್ಯಗಳು ಇನ್ನೂ ಕ್ಷೀಣಿಸಿ ಅದರ ಬೆಲೆಗಳು ಮತ್ತಷ್ಟು ಏರಬಹುದೆಂಬ ಹೆದರಿಕೆ ನನಗೆ.

ಸಿಗರೇಟ್ ಸೇವನೆ ಕ್ಯಾನ್ಸರ್‌ಗೆ ಆಹ್ವಾನವೆಂದು ಒಂದು ವರದಿ ತಿಳಿಸಿದರೆ ಇನ್ನೊಂದು ಸಂಶೋಧನೆ ಪ್ರಕಾರ ಸಿಗರೇಟು ಸೇದಿದರೆ ಹೃದಯ ಚೆನ್ನಾಗಿ ಕೆಲಸ ಮಾಡುತ್ತದೆಯಂತೆ. ''ಟು ಸ್ಮೋಕ್ ಆರ್ ನಾಟ್ ಟು ಸ್ಮೋಕ್'' ಎಂಬ ಸಂಧಿಗ್ದಕ್ಕೆ ಜನ ಬಲಿಯಾಗುತ್ತಾರೆ.

ಚಿಕ್ಕಮಕ್ಕಳು ತಂದೆತಾಯಿಯರ ಜೊತೆ ಮಲಗಿದರೆ ಅವರ (ಮಕ್ಕಳ) ಆಯಸ್ಸು ಕಮ್ಮಿಯಂತೆ. ಈ ಸಂಶೋಧನೆ ಫಲವನ್ನು ಅನುಭವಿಸಲು ಅನೇಕ ತಂದೆ ತಾಯಿಯರು ಕಾತುರವಾಗಿರೋದು ಆಶ್ಚರ್ಯದ ಸುದ್ದಿಯೇನಲ್ಲ. ಮೀನಿನೆಣ್ಣೆಯಿಂದ ಮಧುಮೇಹ ನಿಯಂತ್ರಣವಂತೆ. ಇದರಿಂದ ಮೀನಿಗೆ ಬಲೆ ಬೀಸುವವರ ಸಂಖ್ಯೆ ಹೆಚ್ಚಾಗಿದೆ.

ಸಂಶೋಧನೆಯ ಸತ್ಯಾಸತ್ಯತೆ ಏನೇ ಇರಲಿ ಬಲೆ ಬೀಸುವ ವ್ಯಾಯಾಮದಿಂದಲಾದರೂ ಮಧುಮೇಹಿಗಳ ಆರೋಗ್ಯ ಸುಧಾರಿಸಲೂಬಹುದು.

ಇಷ್ಟೆಲ್ಲಾ ಸಮಸ್ಯೆಗಳಿದ್ದರೂ ಸಂಶೋಧನೆ ನಿರಂತರವಾಗಿ ನಡೆಯುತ್ತಿರಲೇಬೇಕು. ಶ್ರೀಸಾಮಾನ್ಯನಿಗೆ ಅದರ ಅಗತ್ಯವಿದೆ. ಮನೆಯಲ್ಲಿ ನಮಗಿಂತ ಹೆಚ್ಚು ಲವಲವಿಕೆಯಿಂದ ಓಡಾಡಿಕೊಂಡಿರುವ ಜಿರಳೆ, ಹಲ್ಲಿಗಳನ್ನು ಕೊಲ್ಲುವ ಓಡಿಸುವ ಹೊಸ ಔಷಧಿಗಳು ಮಾರುಕಟ್ಟೆಗೆ ಬರಬೇಕು. ಮಾನವನಂತೆ ಜಿರಳೆಗಳು ಕೂಡಾ ತಮ್ಮ ಜೀವ ಉಳಿಸಿಕೊಳ್ಳುವ ಉಪಾಯ ಕಂಡುಕೊಳ್ಳಲು ಸಂಶೋಧನೆ ನಡೆಸುತ್ತಲೇ ಬಂದಿವೆ. ಇತ್ತೀಚಿನ ಒಂದು ವರದಿ ಪ್ರಕಾರ ಜಿರಳೆಗಳು ತಮ್ಮ ಸಿಹಿಹಲ್ಲನ್ನು (ಸ್ವೀಟ್ ಟೂಥ್) ಕಳೆದುಕೊಂಡು ತಮ್ಮ ನಾಲಿಗೆಯ ತುದಿಯ (ಟೇಸ್ಟ್ ಬಡ್) ಬದಲಾಯಿಸಿಕೊಂಡು ಸಿಹಿಯನ್ನು ತಿಂದರೂ ಕಹಿ ಸವಿದಂತಾಗುವ ಅನುಭವ ಪಡೆಯುತ್ತಾ ತನ್ನನ್ನು ಕೊಲ್ಲುವ ಮಾನವ ಪ್ರಯತ್ನಕ್ಕೆ ಸಡ್ಡು ಹೊಡೆದು ನಿಲ್ಲುತ್ತಿದೆಯಂತೆ. ವಿಜ್ಞಾನಿಗಳಿಗೆ ಯಾವಾಗಲೂ ಸವಾಲು ಇದ್ದದ್ದೇ. ಅವರು ಯಾವಾಗಲೂ ಕಾರ್ಯಪ್ರವೃತ್ತರಾಗಿರಬೇಕು.

✺

---



# ನಮ್ಮ ದೇಶಾನ ಚೊಕ್ಕಟ ಮಾಡಲು ರೆಡಿ!

**- ಇ.ಆರ್. ರಾಮಚಂದ್ರನ್**

**ಪ್ರ**ಜಾವಾಣಿ ಓದುತ್ತಿದ್ದ ಅಜ್ಜಿ ಪೇಪರ್ನ ರೊಯ್ಯನೆ ಬೀಸೆಸೆದರು.

ಅಜ್ಜಿಗೆ ಕೋಪ ಬಂದಾಗ ದೂರ್ವಾಸ ಏನೂ ಇಲ್ಲ, ಅಜ್ಜಿ ಮುಂದೆ.

'ಯಾಕಜ್ಜಿ! ಮೂಡ್ ಆಫಾಗಿದಿಯಾ ಇವತ್ತು? ಏನಾಯ್ತು?'

'ನೋಡೋ! ಎಂಭತ್ತೊಂದು ವರ್ಷದ ಮುದುಕ, ಚರಂದಾಸ್ ಮೊಹಂತಿ ಮನಮೋಹನ್ಸಿಂಘ್ರ ಕ್ಯಾಬಿನೆಟ್ಗೆ ಸೇರಿದ ತಕ್ಷಣವೇ, 'ನಾನು ಸೋನಿಯಾ ಗಾಂಧಿಯ ಮನೆ ಗುಡಿಸಲೂ ರೆಡಿ ಅಂತಾನೇ!' ಸ್ವಾತಂತ್ರ ಬಂದು 66 ವರ್ಷ ಆಗ್ತಾ ಬಂತು, ಇನ್ನೂ ಗುಲಾಮ್ಗಿರಿ ಹೋಗಿಲ್ಲ, ಎಂಥ ದುರ್ಗತಿ ಬಂತು ದೇಶಕ್ಕೆ. ಪಬ್ಲಿಕ್ಕಾಗೇ ಬೆಣ್ಣೆ ಹಚ್ತಾನಲ್ಲಾ!'

> **ಒಬ್ಬರು ಗುಡಿಸಲಿಕ್ಕೆ ತಯಾರ್, ಇನ್ನೊಬ್ಬರು ಗುಡಿಸಲಕ್ಕೂ ನಾಲಾಯಕ್. ಎಂಥ ಪರಿಸ್ಥಿತಿ!**

'ಅಜ್ಜಿ! ನೀನು ಎಕ್ಸೈಟ್ ಆಗ್ಬೇಡಾ! ನಿನ್ನ ಬಿಪಿಗೆ ಇದು ಒಳ್ಳೇದಲ್ಲ! ಇದೆಲ್ಲಾ ಪಾಲಿಟಿಕ್ಸ್ನಲ್ಲಿ ಮಾಮೂಲು. ಇವೆಲ್ಲಾ ಮಾಡಿಕೊಂಡೇ ಇವರೆಲ್ಲ ಮುಂದೆ ಬಂದಿರೋದು! ಒಂದು ವೇಳೆ ಮೊಹಂತಿ ಸೋನಿಯಾ ಮನೆಗೆ ಬೆಳಿಗ್ಗೆ ಪೊರಕೆ ಮೊರ ಸಮೇತ ಪ್ರತ್ಯಕ್ಷವಾದರೆ ಸೋನಿಯ ಏನು ಮಾಡಬಹುದು ಅಜ್ಜಿ?'

'ನ್ಯಾಯವಾಗಿ ಅಂಥಾವ್ರಿಗೆ ಅದರಿಂದಲೇ ಅವರ ಪೂಜೆ ಮಾಡಿ ಮನೆಗೆ ಕಳಿಸಬೇಕು! ಅದರ ಬದುಲು ಸೋನಿಯ ಹೀಗೆ ಹೇಳ್ತಾರೇಂತ ಅನ್ಸುತ್ತೆ: 'ನಿಮಗೇನಾದ್ರು ಹುಚ್ಚು ಗಿಚ್ಚು ಹಿಡಿದಿದೆಯಾ? ನಿನ್ನೆ ಮಂತ್ರಿಯಾದ ತಕ್ಷಣವೇ ನಿಮಗೆ ಈ ಚಾನ್ಸು ಸಿಗುತ್ತಾ? ವಯಸ್ಸಾಗಿದೆ, ಅಷ್ಟೂ ಯೋಚಿಸ್ಬಾರ್ದಾ ನೀವು? ಯೂಪಿಏ 2ನಲ್ಲಿ ಎಷ್ಟು ಮಂತ್ರಿಗಳಿದ್ದಾರೆ, ಯೂಪಿಏ 1ನಲ್ಲಿ ಎಷ್ಟು ಮಂತ್ರಿಗಳು ಬಂದು ಹೋದ್ರು? ಅವರೆಲ್ರೂ ಅವರವರ ಚಾನ್ಸಿಗೆ ಕಾಯ್ತಿಲ್ವಾ? ನಿಮ್ಮ ಚಾನ್ಸು ಬರುವಷ್ಟರಲ್ಲಿ ನಿಮ್ಮ ಕಥೆ ಮುಗಿದ್ಹೋಗಿರುತ್ತೆ ಗೊತ್ತಾ....? ಇನ್ನೊಂದು ವಿಷಯ.. ನಮ್ಮ ಮನೇಲೆ ನಾನೊಬ್ಬಳೇ ಅಲ್ಲ, ನನ್ನ ಮಗನೂ ಇದಾನೆ. ಅವನ ರೂಮು ಗುಡಿಸಿ, ಸಾರಿಸೋದಕ್ಕೆ ಇಟಲಿಯಿಂದ ಕೂಡಾ ಜನ ಬರೋದಕ್ಕೆ ರೆಡಿಯಿದಾರೆ. ಅವನು 'ಹುಂ' ಅಂದ್ರೆ ಸಾಕು. ಬಾಗ್ಲ ಹತ್ರ ಪರ್ಕೆ, ಸಾರ್ನೊಬಟ್ಟೆ ಹಿಡ್ಕೊಂಡು ಕ್ಯೂನೆ ನಿಲ್ಲುತ್ತೆ!' ಅಂತ ಮೂದಲಿಸಿರೋವ್ರು.'

'ಹ ಹ ಅಜ್ಜಿ!'

'ಇಲ್ದಿದ್ರೆ ಹೀಗೂ ಹೇಳಿರೋವ್ರೋ ಏನೋ, 'ಕಸ ಗುಡ್ಸೋದ್ರಲ್ಲಿ ನಿಮಗೇನಾದ್ರೂ ಎಕ್ಸ್‌ಪೀರಿಯನ್ಸ್ ಇದೆಯಾ? ಎಷ್ಟು ಮನೆಗಳು ಮಾಡ್ಕೊಂಡಿದೀರಾ? ಇದು ರಾಜಕೀಯ ಅಲ್ಲ, ಇಷ್ಟ ಬಂದ್ಹಾಗೆ ತಿಪ್ಪೆ ಸಾರಿಸ್ಕೊಂಡ್ಹೋಗಕ್ಕೆ. ನೀವು ಗುಡಿಸುವಾಗ ಇಂಪಾರ್ಟೆಂಟ್ ಪೇಪರ್ಸ್ ಸಿಗ್ಬಹುದು. ನನ್ನ ಅಳಿಯ ಸ್ವಲ್ಪ ಬೇಜವಾಬ್ದಾರಿ. ಮರೆಯೋ ಸ್ವಭಾವ ಬೇರೆ. ಬ್ಯಾಂಕಿಗೆ ಅವ್ನು ಅಪ್ಲಿಕೇಷನ್ ಹಾಕ್ದೇನೇ ಅವ್ರು ಕೋಟಿಗಟ್ಟಲೆ ರೂಪಾಯಿ ಲೋನ್ ಕೊಟ್ಟಿದಾರೇಂತ ಮರ್‍ತೇ ಬಿಟ್ಟಿದ್ದ ಭೂಪತಿ! ಸಾವಿರಾರು ಎಕರೆ ಜಮೀನು ತೊಗೊಂಡಿರೋದು ಹರ್ಯಾಣಾಲಾ ಅಥವಾ ರಾಜಾಸ್ಥಾನಲ್ಲಾಂತ ಜ್ಞಾಪಕ ಕೂಡ ಇರಲ್ಲ ಅವನಿಗೆ. ಒಂದೊಂದ್ಸರ್ತಿ ವಡ್ಡನ ಹಾಗೆ ಅದೂ ಇದೂ ವದರ್‍ತಾ ಇರ್‍ತಾನೆ.... ಯಾರ ಜೊತೆ ಬಿಸಿನೆಸ್ ಡೀಲು ಮಾಡಿರೋದು – ಡಿಎಲ್ ಎಫ್ಹಾ, ಟಿಸಿಎಸ್ಸಾ, ಎಐಸಿಸಿನಾ – ಏನೂ ಐಡಿಯಾ ಇರಲ್ಲ... ಅದಕ್ಕೇ ಪೇಪರ‍್ಸು, ಖಾತಾ, ಬ್ಯಾಂಕ್ ಪಾಸ್ ಬುಕ್ಕು ಎಲ್ಲಾ ಅಲ್ಲಲ್ಲೇ ಬಿಸಾಕಿರ್‍ತಾನೆ. ಅದನ್ನೆಲ್ಲಾ ಜೋಪಾನವಾಗಿ ಜೋಡ್ಸಿಟ್ಟು ಗುಡಿಸ್ಬೇಕು. ಅದೆಲ್ಲಾ ನಿಮ್ಕೈಲಾಗುತ್ತಾ? ನಿಮ್ಮನ್ನೇ ಜೋಡಿಸ್ಕೊಳೋ ಸ್ಥಿತೀಲಿಲ್ಲಾ ನೀವು! ಈಗ ತಾನೇ ಮಿನಿಷ್ಟ್ರಾಗಿದ್ದೀರಾ. ಥೋಡಾ ಆರಾಮ್ ಕೀಜೀಯೆ!' ಅಂತ ಎಚ್ಚರಿಸೋವ್ರು.'

ಅಜ್ಜಿ.. ನೀನು ಪರ್ಫೆಕ್ಟಾಗಿ ಗೆಸ್ ಮಾಡ್ತಿದೀಯ.... ಸೋನಿಯ ಹೀಗೇನಾದ್ರೂ ಹೇಳಿರಕ್ಕೆ ಚಾನ್ಸು ಇದೆಯಾ? 'ನೀವು ವಯಸ್ಸಿನಲ್ಲಿ ಹಿರಿಯವರು. ಹೀಗೆಲ್ಲಾ ಹೇಳೋದು ಸರಿಯಿಲ್ಲ. ನಿಮ್ಮ ಕೆಲಸ ಚೆನ್ನಾಗಿ ಮಾಡಿ, ಅದೇ ಸಾಕು. ಆರೋಗ್ಯ ಚೆನ್ನಾಗಿ ನೋಡಿಕೊಳ್ಳಿ. ಇನ್ನುಮುಂದೆ ಹೀಗೆಲ್ಲಾ ಮಾಡಿ ನಮ್ಮನ್ನು ನೋಯಿಸಬೇಡಿ.'

'ಇದು ಪೌರಾಣಿಕ ಸಿನಿಮಾ, ಕಥೆಯಲ್ಲಿ ಬರುವ ಅಥವಾ ಹಳೆಯ ಕಾಲದ ಮಾತಾಯ್ತೋ! ಈಗ ಸಾಧ್ಯವೇ ಇಲ್ಲ.'

'ಇನ್ನೊಂದು ಗೊತ್ತಾ.... ವೇಣಿ ಪ್ರಸಾದ್ ವರ್ಮ ಅನ್ನೋ ಮಿನಿಸ್ಟರ್ 'ಸಮಾಜವಾದಿ ಪಕ್ಷದ ನಾಯಕ ಮುಲಾಯಂಸಿಂಘ್, ಮನ್ಮೋಹನ್ಸಿಂಘ್‌ರ ಮನೆ ಕಸಗುಡ್ಸಕ್ಕೂ ಲಾಯಕ್ಕಿಲ್ಲ!' ಅಂತ ಅವ್ರ ಮೂಗು ಮುರಿದಿದ್ದಾರೆ, ಓದಿದ್ಯಾ ಅಜ್ಜಿ?'

'ನೋಡ್ದೆ. ನನಗನ್ನುತ್ತೆ, ವೇಣಿ ಮತ್ತು ಮುಲಾಯಂ ಇಬ್ಬರೂ ಅದೇ ಕೆಲಸಕ್ಕೇಂತ ಮನ್ಮೋಹನ್ರ ಮನೆಗೆ ಹೋದಾಗ, ಮುಲಾಯಂನ ನೋಡಿ ಈತ ಈ ಕೆಲಸಕ್ಕೆ ಲಾಯಕ್ಕಿಲ್ಲಾಂತ ಮನ್ಮೋಹನ್ರಿಗೆ ಗೊತ್ತಾಗಿರುತ್ತೆ. ಅವರು ಅಂದುಕೊಂಡ ಹಾಗೆ ಮುಲಾಯಂ ಮುಂದೆ ಮುಖ್ಯಮಂತ್ರಿಯಾದರು. ಉಳಕೊಂಡವರು ಆ ಕೆಲಸಕ್ಕೆ ವೇಣಿ ಒಬ್ಬರೇ! ಅದರಲ್ಲೇ ಮುಂದೆ ಪ್ರಮೋಷನ್ನೂ ಸಿಕ್ಕಿ ಮಿನಿಸ್ಟರ್ರೂ ಆದ್ರು ಅಂತ ಅನ್ಸುತ್ತೆ. ಅದಕ್ಕೇ ಅವ್ರು ಮುಲಾಯಂನ ಬಗ್ಗೆ ಹಾಗೆ ಹೇಳಿದ್ದು.'

'ಚೆನ್ನಾಗಿದೆ ನಿನ್ನ ಥಿಯರಿ!'

'ಈಗ ಸ್ವಲ್ಪ ವರ್ಷದ ಹಿಂದೆ ಮನೆ ಕೆಲಸದವಳೊಬ್ಬಳು ರಾಜಕಾರಿಣಿ ಮನೇಲಿ ಅವರಿಗೆ ಬಿಸಿ ನೀರು ತೋಡಿಕೊಡೋಣಾಂತ ಹಂಡೆ ತೆಗೆದಾಗ ಅದರಲ್ಲಿ ಬಿಸಿ ನೀರಿನ ಬದ್ಲು ಅದರ ಬಾಯಿಯ ತನಕ ನೋಟು ತುರುಕಿದ್ರು, ಜ್ಞಾಪಕವಿದೆಯಾ.....?'

'ಅದು ಹಿಮಾಚಲ ಪ್ರದೇಶದ ಸಿಎಮ್ ಮನೇಲಿ ಅಜ್ಜಿ!'

'ಇನ್ಕಮ್ ಟ್ಯಾಕ್ಸ್‌ನವ್ರು ಬಾತ್ ರೂಮಿನ ಗೋಡೆ, ಸೂರು, ನೆಲ ಎಲ್ಲಾ ಕೆಡವಿ ಬಚ್ಚಿಟ್ಟಿದ್ದ ಕೋಟ್ಯಾಂತರ ರೂಪಾಯಿಯನ್ನು ಜಪ್ತಿ ಮಾಡಿದರು. ಆಮೇಲೆ ಗೊತ್ತಾಯ್ತು ಸಿಎಮ್ ಹಿಮಾಚಲ್ ಪ್ರದೇಶವನ್ನೇ ಚೊಕ್ಕಟ ಮಾಡಿ ನೋಟುಗಳನ್ನು ಹಂಡೆ, ಟೊಳ್ಳು ಗೋಡೇಲಿ ತುಂಬ್ಸಿಟ್ಟಿದ್ರು.'

'ಹ ಹ.'

'ನೋಡು ಈಗ ಗೊತ್ತಾಯ್ತು ಗುಡಿಸ್ತೀನಿ ಅಂದ್ರೆ ಏನರ್ಥಾಂತ! ಒಟ್ನಲ್ಲಿ ನಮ್ಮ ಪಾಲಿಟೀಷಿಯನ್ಸು ನಮ್ಮ ದೇಶವನ್ನು ಚೊಕ್ಕಟ ಮಾಡಲು ಯಾವಾಗಲೂ ರೆಡಿಯಾಗಿರ್ತಾರೆ ಕಣೋ. ಅದಕ್ಕೆ ಮಾತೆತ್ತಿದ್ರೆ 'ಗುಡಿಸ್ತೀನಿ, ಅವನ ಛಾನ್ಸು ಆಯ್ತು, ಈಗ ನನ್ನ ಛಾನ್ಸೂಂತ' ಕಾಯ್ತಾ ಇರ್ತಾರೆ!'

'ಸರಿಯಾಗಿ ಹೇಳ್ದೆ ಅಜ್ಜಿ ಇದಕ್ಕೆ 'ಬೋಳ್ಸೋದು ಅಥವಾ ಕ್ಲೀನ್ ಅಪ್' ಅಂತಾನೂ ಹೇಳ್ತಾರೆ.'

'ಗುಲಾಮ್ಗಿರಿ, ಗುಡ್ಸೋಗಿರಿ ಎರಡ್ನೂ ಸೇರ್ಸಿ ದೇಶಾನ ಚೊಕ್ಕಟ ಮಾಡ್ತಾ ಇದಾರೇಂತ ನನ್ನಗನ್ಸುತ್ತೆ!'

✸

---

ಒಬ್ಬ ನಾನು ಯಾವತ್ತೂ ನನ್ನ ಕೆಲಸದಲ್ಲಿ ಪ್ರತಿಶತ ನೂರು ತೊಡಗಿಸಿಕೊಳ್ತೀನಿ ಅಂದನಂತೆ.

ಹೇಗೆ ಅಂತ ಕೇಳಿದರೆ:

ಸೋಮವಾರ 12 ಪ್ರತಿಶತ

ಮಂಗಳವಾರ 40 ಪ್ರತಿಶತ

ಬುಧವಾರ 20 ಪ್ರತಿಶತ

ಗುರುವಾರ 15 ಪ್ರತಿಶತ

ಶುಕ್ರವಾರ 13 ಪ್ರತಿಶತ

ಅಂದನಂತೆ

# ಟೋಪಿವಾಲಾ!

**- ಶರತ್ ಕಲ್ಕೋಡ್**

**ಬೆಂ**ಗಳೂರಿನ ನಂದಿನಿ ಲೇಔಟ್‌ನ ಸರ್ಕ್ಯುಲರ್ ಪಾರ್ಕ್‌ನಲ್ಲಿ ಬೆಳಗಿನ ನಮ್ಮ ವಾಕಿಂಗ್ ಆತುರ ಆತುರದ್ದು. ಯಾಕೆಂದರೆ ಹೆಚ್ಚಿನವರು ಆಫೀಸ್ ಮುಂತಾದ ಕಡೆಗಳಿಗೆ ಹೊಟ್ಟೆಪಾಡಿಗಾಗಿ ಸಮಯಕ್ಕೆ ಸರಿಯಾಗಿ ಹಾಜರಾಗಬೇಕಲ್ಲ? ಹಾಗಾಗಿ ನಾವು ಕೆಲವರು ಅಲ್ಲಿ ಮತ್ತೆ ಸೇರುತ್ತಿದ್ದದ್ದು ಸಂಜೆ. ಕಲ್ಲುಬೆಂಚ್ ಮೇಲೆ ಕುಳಿತು ಆರಾಮಾಗಿ ಕಾಡುಹರಟೆ ಹೊಡೆಯಲು!

ವಾಕಿಂಗ್ ಮಿತ್ರರಲ್ಲಿ ಜಯದೇವ ಒಬ್ಬರು. ಜಯದೇವರ ವಿಶೇಷ ಎಂದರೆ ನನ್ನಂತೆ ಅವರೂ ಹಳ್ಳಿಯಿಂದ ಉದರ ನಿಮಿತ್ತಂ ಪಟ್ಟಣಕ್ಕೆ ವಲಸೆ ಬಂದವರು. ಆದರೂ ಹಳ್ಳಿಗಳೆಂದರೆ ಪಂಚ ಪ್ರಾಣ. ಅವರ ಹಾವಭಾವ, ಮಾತಿನ ಶೈಲಿ, ಗಾದೆಮಾತು, ಘಟನೆಗಳ ನಿರೂಪಣೆ, ಭಾಷೆ ಎಲ್ಲದರಲ್ಲೂ ಬಯಲು ಸೀಮೆಯ ಹುಟ್ಟೂರಿನ ಛಾಪು! ಮಾತೆತ್ತಿದರೆ ಹಳ್ಳಿತನದ ಸೊಗಡು!! ರಜಾ ಸಿಕ್ಕರೆ ಸಾಕು, ಜಯದೇವ ನಾಪತ್ತೆ. ಮತ್ತೆ ಪ್ರತ್ಯಕ್ಷವಾದಾಗ ಕೇಳಿದರೆ, ಯಾವುದೋ ಹಳ್ಳಿಗೆ ಹೋಗಿ ಬಂದ ವಿಸ್ತಾರ ವರದಿ ಒಪ್ಪಿಸೋದು ಗ್ಯಾರಂಟಿ. ಮುಂದಿನ ಘಟನೆ ಜಯದೇವರ ಕಿಸೆಯೊಳಗಿನ ಒಂದು ನಾಣ್ಯ...

**ಮಂಡಿನೋವು ಎಂಬ ಪೀಡೆಗೆ ಇದು ಪವರ್‌ಫುಲ್ ಔಷಧ ಹೌದೆ?**

ಯಥಾಪ್ರಕಾರ ಸಿಕ್ಕ ರಜೆಯ ಒಂದು ದಿನ ಜಯದೇವ, ಬೆಂಗಳೂರ ಕೆ.ಆರ್. ಪೇಟೆ ಸಮೀಪದ ಸಂತೆಬಾಚ ಹಳ್ಳಿಯ ಮಾಸ್ತರಾಗಿದ್ದ ಮಾವನ ಮನೆಗೆ ಹಿಂದಿನ ರಾತ್ರಿಯೇ ಹೋಗಿದ್ದಾರೆ. ಬೆಳಿಗ್ಗೆ ಎದ್ದವರೆ ಕೆರೆಯ ಏರಿ ಮೇಲೆ ವಾಕಿಂಗ್ ಹೊರಟಿದ್ದಾರೆ. ಪ್ರಕೃತಿಯ ರಮ್ಯ ನೋಟ ಸವಿಯುತ್ತಾ, ಹೊಲಗದ್ದೆಗಳಲ್ಲಿ ಬೆಳೆದ ಪೈರನ್ನು ಆಸ್ವಾದಿಸುತ್ತಾ, ದಾರಿಯಲ್ಲಿ ಸಿಕ್ಕ ರೈತರ ಕಷ್ಟ ಸುಖ ವಿಚಾರಿಸಿಕೊಳ್ಳುತ್ತಾ, ಊರ ಹೊರಗಿನ ಬಯಲ ಸಮೀಪದ ಬಂಡೆಯೊಂದರ ನೆರಳಲ್ಲಿ ಕೈಕಾಲು ಚಾಚಿ ಮಗ್ಗುಲಾಗಿ ವಿಶ್ರಮಿಸಿಕೊಳ್ಳುತ್ತಿದ್ದಾರೆ. ದೂರದಿಂದ ಜಲ್ಲಿಕಲ್ಲಿನ ರಸ್ತೆಯಲ್ಲಿ, ಹುಡುಗನೊಬ್ಬ ಸೈಕಲ್ ತುಳಿಯುತ್ತಾ ಬರುವುದನ್ನು ಕಂಡು, ತಮ್ಮ ಬಾಲ್ಯದ ದಿನಗಳ ಸೈಕಲ್ ಸಾಹಸದ ಗುಂಗಿನಲ್ಲಿ ಮೈಮರೆತರು. ಮತ್ತೆ ಅವರು ವಾಸ್ತವಕ್ಕೆ ಬಂದದ್ದು ಸೈಕಲ್ ಏರಿ ಬಂದ ಹುಡುಗ ಹತ್ತಿರಕ್ಕೆ ಬಂದು ಬೆಲ್ ಬಾರಿಸಿ, ''ಬಾವಾರೆ... ಬಾವರೇ'' ಎಂದು ದನಿ ಎತ್ತಿ ಕರೆದಾಗಲೇ...!

''ಏನ್ ತಮ್ಮಯ್ಯ, ಯಾರನ್ನ ಕರೀತಾಯಿದ್ದೀ ನೀನು...?''

''ಇನ್ಯಾರನ್ನ? ನಿಮ್ಮನ್ನೇಯಾ! ಮಾಸ್ತರಮಾವ ಕರೀತಾವ್ರೆ ನಿಮ್ಮನ್ನಾ. ಅರ್ಜೆಂಟ್ ಬರ್ಬೇಕಂತೇ'' ಟವಲ್‌ನಿಂದ ಮುಖದ ಬೆವರೊರಿಸಿಕ್ಕೊಳ್ಳುತ್ತಾ ನುಡಿದು, ''ನಾ ಮುಂದೆ ಹೋಯ್ತೀನಿ. ಬೇಗ ಬನ್ನಿ ಮತ್ತೆ...'' ಅನ್ನುತ್ತಾ ಸೈಕಲ್ ಏರಿ ಮಾಯವಾದ.

ಜಯದೇವ ಲಗುಬಗೆಯಲ್ಲೇ ಬಂದು ನೋಡಿದರೆ ಮಾಸ್ತರ ಮನೆ ಜಗುಲಿ ಮೇಲೆ, ಕಂಬದ ಬಳಿ ಮಾಮೂಲು ಕುರ್ಚಿಯಲ್ಲಿ ಮಾವ ಆಸೀನರಾಗಿದ್ದಾರೆ. ಎದುರಿನ ಸಾಲ ಕುರ್ಚಿ ಒಂದರಲ್ಲಿ ಅಪರಿಚಿತರೊಬ್ಬರು ಕುಳಿತಿದ್ದಾರೆ. ವೇಷ-ಭೂಷಣ ನೋಡಿದರೆ ಅರೆ ಮಾರ್ಡ್‌ನ್ ಸ್ಟೈಲ್‌ನದ್ದು. ಕೋಟು, ಟೈ, ಪ್ಯಾಂಟ್ ತೊಟ್ಟ ವ್ಯಕ್ತಿಯ ಕಾಲಿಗೆ ಹವಾಯಿ ಚಪ್ಪಲು. ಕೂಲಿಂಗ್ ಗ್ಲಾಸ್ ಬೇರೆ. ಕೆದರಿದ ಕೂದಲು. ತಲೆ ಆವರಿಸಿದ ರೌಂಡು ಕಪ್ಪು ಟೊಪ್ಪಿ. ಪಕ್ಕದಲ್ಲೊಂದು ಚಚ್ಚೌಕದ ಚರ್ಮದ ಬ್ಯಾಗ್. ಅದರಲ್ಲಿ ವಿವಿಧ ಬಗೆಯ ಔಷಧಗಳು. ನಾರು-ಬೇರು.

''ನೋಡಿ ಇವರು ಡಾಕ್ಟ್ರಂತೆ. ನನ್ನ ಪ್ರಾಣ ತಿಂತೈತಲ್ಲಾ ಮಂಡಿ ನೋವು ಅದಕ್ಕೆ ಘನಾಂದಾರಿ ಮದ್ದು ಕೊಡ್ತಾರಂತೆ. ಆ ಔಷಧ ಅಂದ್ರೆ, ನನ್ನ ಈ ಮಂಡಿ ರೋಗಕ್ಕೆ ರಾಮಬಾಣ ಅಂತಾರೆ. ಆದ್ರೆ ಚಾರ್ಜು ಸ್ವಲ್ಪ ದುಬಾರಿ ಅನ್ನಿಸುತ್ತೆ. ಏನ್ ಮಾಡೋಣ ಹೇಳು. ನೀನು ಹೇಳಿದ ಹಾಗೇ ಮಾಡ್ತೀನಿ. ಅದಕ್ಕೆ ನಿನ್ನ ಅರ್ಜೆಂಟಾಗಿ ಬರ ಹೇಳಿದ್ದು.''

ಜಯದೇವ, ಡಾಕ್ಟ್ರನ್ನ ನೋಡಿದರು. ಡಾಕ್ಟ್ರು ತಮ್ಮ ಪ್ರವರ ಪ್ರಾರಂಭಿಸಿದರು: ''ನೋಡ್ರೀ ನಾನು ಆದಿ ಚುಂಚನಗಿರಿಯಲ್ಲಿ ಇವತ್ತಿಂದ ನಡೆಯುತ್ತದೆಯಲ್ಲಾ, ನಾಟಿ ಔಷಧಿ ಸಮ್ಮೇಳನ, ಅದಕ್ಕೆ ಬನ್ನಿ ಅಂತಾ ಸ್ವಾಮೀಜಿಗಳೇ ಖುದ್ದಾಗಿ ನಮ್ಮನ್ನ ಕರೆಸಿದ್ರು. ಸುತ್ತಮುತ್ತ ನಾಲ್ಕು ಊರ ಜನರಿಗೆ ಉಪಕಾರ ಆಗ್ಲಿ ಅಂತ ಬೆಳಗ್ಗೆ ನಾನು ಎದ್ದವನೇ ಮಠದಿಂದ ಹಳ್ಳಿ ಮೇಲೆ ಹೊರಟೆ. ನನ್ನ ಊರು ಉತ್ತರ ಕರ್ನಾಟಕ. ಆದರೆ ನಾನು ಆಯುರ್ವೇದ ಕಲಿತದ್ದು ಹಿಮಾಲಯದಲ್ಲಿ. ಒಂದಲ್ಲ, ಎರಡಲ್ಲ; ಹತ್ತುವರ್ಷ ಕಾಲ ಸ್ಟಡೀ ಮಾಡೀನಿ. ದುಡ್ಡು ಮಾಡೋಕ್ಕಲ್ಲ ನಾನಿಲ್ಲಿಗೆ ಬಂದದ್ದು. ನಮ್ಮ ಪ್ರಾಚೀನ ಔಷಧಿ ಪದ್ಧತಿ, ಆಯುರ್ವೇದ ಇದೆಯಲ್ಲಾ, ಅದನ್ನ ಪ್ರಚಾರ ಮಾಡಬೇಕೂ ಅನ್ನೋದೆ ನನ್ನ ಆಶಯ ಅಷ್ಟೇ! ಆದಿಚುಂಚನಗಿರಿ ಸ್ವಾಮೀಜಿಗಳವರ ಇರಾದೇನೂ ಅದೇ. ಆಯುರ್ವೇದ ಉಳಿದು ಬೆಳೆದರೆ ನಮ್ಮಿಬ್ಬರ ಶ್ರಮ-ಜನ್ಮ ಸಾರ್ಥಕ!!''

ಅಷ್ಟರಲ್ಲಿ ಮನೆಯೊಳಗಿಂದ ಡಾಕ್ಟರ್ ಆಶಯದಂತೆ ಬೋರ್ನವಿಟಾ ತಯಾರಾಗಿ ಬಂತು. ಔಷಧವನ್ನು ಬೋರ್ನವಿಟಾದಲ್ಲೇ ಬೆರೆಸಿಕೊಡಬೇಕೆಂಬುದು ಡಾಕ್ಟರ್ ಸಲಹೆ. ಹಾಗೇ ಅತಿಥಿ ಡಾಕ್ಟರಿಗೂ ಬೋರ್ನವಿಟಾ ಕೊಡದೇ ಸತ್ಕರಿಸಲು ಸಾಧ್ಯವೇ? ಬಾಟ್ಲಿಯ ಔಷಧವೊಂದನ್ನು ಚಮಚವೊಂದರಲ್ಲಿ ತೆಗೆದು ರೋಗಿಗೆ ನೀಡಿ, ಡಾಕ್ಟರ್ ತಾವೂ ಬೋರ್ನ್‌ವಿಟಾವನ್ನು ಚಪ್ಪರಿಸತೊಡಗಿದರು.

ಡಾಕ್ಟರ್ ಚಲನವಲನ ಗಮನಿಸುತ್ತಲೇ ಜಯದೇವ ಮನಸ್ಸಿನಲ್ಲೇ ಅಳೆದು ತೂಗಿ ನೋಡಿದರು. ಆದಿಚುಂಚನಗಿರಿಯಲ್ಲಿ ನಾಟಿ ಔಷಧಿ ಸಮ್ಮೇಳನದ ಬಗ್ಗೆ ಬೆಳಗ್ಗೆ ಓದಿದ ಪೇಪರಿನಲ್ಲಾಗಲೀ, ನಿನ್ನೆಮೊನ್ನೆಯದರಲ್ಲಾಗಲೀ ಸುದ್ಧಿಯಿರಲಿಲ್ಲ. ಸುದ್ಧಿಯಾಗದೇ ನಡೆಯುವಂತಹ ಸಮ್ಮೇಳನ ಅದಲ್ಲ. ಹೋಗಲಿ ಸುತ್ತಮುತ್ತ ಹಳ್ಳಿಗಳಲ್ಲಾದರೂ ಸುದ್ಧಿಯಾಗಬೇಕಲ್ಲ, ಅದೂ ಇಲ್ಲ!

''ನಿಮ್ಮ ವೈದ್ಯಕೀಯಕ್ಕೆ ಸಂಬಂಧಿಸಿದಂತೆ ಏನಾದರೂ ಸರ್ಟಿಫಿಕೇಟ್ ಅಥವಾ ಯಾರಾದ್ದಾದರೂ ಶಿಫಾರಸ್ಸು ಪತ್ರಗಳಿವೆಯೇ?'' ಜಯದೇವ ಕುತೂಹಲದಿಂದ ಒಂದು

ಬಾಣ ಎಸೆದರು. ಆ ಮಾತು ಕೇಳಿದ್ದೇ ತಡ, ಆ ಡಾಕ್ಟರ್ ಮಹಾಶಯ ತನ್ನ ಚರ್ಮದ ಬ್ಯಾಗಿನ ಅರೆಯೊಂದರೊಳಗೆ ಕೈ ಹಾಕಿ ಪೇಪರ್ ಕಂತೆಯನ್ನೇ ಹೊರತೆಗೆದು ಪ್ರಶ್ನಿಸಿದವರ ಮುಖಕ್ಕೆ ರಾಚಿದ! ಅದರೊಂದಿಗೆ ಜೋತಿಷಿಗಳು ತಮ್ಮ ಪ್ರಚಾರಕ್ಕೆ ಬಳಸುವಂತೆ ಪ್ರಸಿದ್ಧ ಸಿನಿಮಾ ನಟ–ನಟಿಯರೊಂದಿಗೆ, ರಾಜಕಾರಣಿಗಳೊಂದಿಗೆ, ಧಾರ್ಮಿಕ ಪುರುಷರೊಂದಿಗೆ ಹಾಗೂ ಪ್ರಸಿದ್ಧರೊಂದಿಗೆ ತೆಗೆಸಿಕೊಂಡ ಭಾವಚಿತ್ರಗಳು. ಅದರಲ್ಲಿ ಮಲ್ಲಾಡಿಹಳ್ಳಿ ಸ್ವಾಮಿಜೀಯವರೊಂದಿಗೆ ಇದ್ದ ಭಾವಚಿತ್ರವೂ ಒಂದು. ಸೂಕ್ಷ್ಮವಾಗಿ ಪರಿಶೀಲಿಸಿದಾಗ ಜಯದೇವರಿಗೆ, ಅವೆಲ್ಲಾ ಕಂಪ್ಯೂಟರ್‌ನಲ್ಲಿ ಯಾರದ್ದೋ ತಲೆಗೆ, ಕೈಗಳಿಗೆ, ಬೇಕಾದವರ ತಲೆ, ಕೈಗಳನ್ನು ಜೋಡಿಸಿದವು ಎಂಬುದು ಸ್ಪಷ್ಟವಾಗಿ, ಇವ 'ಢೋಂಗಿಡಾಕ್ಟರ್' ಎಂಬುದು ಖಾತರಿಯಾಯಿತು. ಆದರೂ ಗುಟ್ಟು ಬಿಟ್ಟುಕೊಡದೇ, ''ಮಾವ ಅವರ ಔಷಧಿಗೆ ಎಷ್ಟು ಹಣ ಬೇಕಾಗುತ್ತದೆ'' ಎಂದು ಮುಗ್ಧವಾಗಿಯೇ ಪ್ರಶ್ನಿಸಿದರು.

''ಎರಡುಸಾವಿರ ರೂಪಾಯಿ ಆಗುತ್ತದೆ. ಅದು ಹಿಮಾಲಯದಿಂದ ತಂದದ್ದು. ಅಲ್ಲೂ ಸುಲಭದಲ್ಲಿ ಸಿಗುವಂತದ್ದಲ್ಲ. ಆದರೆ ನಾನು ಐನೂರು ಕಮ್ಮಿ ಮಾಡಿಕೊಳ್ಳುತ್ತೇನೆ. ಯಾಕೆಂದರೆ ಆಯುರ್ವೇದ ಪ್ರಚಾರ ಆಗಬೇಕು. ಜನಪ್ರಿಯವಾಗಬೇಕು. ಅದಕ್ಕಾಗಿ. ನನಗೆ ದುಡ್ಡು ಮುಖ್ಯ ಅಲ್ಲವೇಅಲ್ಲ ನೋಡಿ. ಒಂದೂವರೆ ಸಾವಿರ ಕೊಡಿ.''

ಮಾತಿನ ನಡುವೆ ರೋಗಿಗೆ ಒಂದು ಚಮಚ ಹಸಿರು ಔಷಧಿ ಬೆರಸಿ, ಬೋರ್ನ್‌ವಿಟಾ ಕುಡಿಸಿದ್ದೂ ಆಯ್ತು!

ಸರಿ, ಔಷಧಿಯ ರೇಟಿನ ಬಗ್ಗೆ ಚೌಕಾಶಿ ಪ್ರಾರಂಭವಾಯಿತು.

''ಐನೂರು'' ಅಂತ ಜಯದೇವ ಶುರು ಮಾಡಿದರೆ, ಡಾಕ್ಟರ್ ''ಒಂದೂವರೆ ಸಾವಿರ ಕಮ್ಮಿ ಅಸಾಧ್ಯ'' ಅಂತ ಪಟ್ಟು ಹಿಡಿದರು. ಬಹಳ ಹೊತ್ತು ಎಳೆದುಹೋಯ್ದು ಆದ ಮೇಲೆ ಎಂಟನೂರಕ್ಕೆ ಒಪ್ಪಂದವಾಯಿತು.

ಎಲ್ಲಾ ಆದ ಮೇಲೆ ಜಯದೇವ ದೂರದಲ್ಲಿ ನಿಂತಿದ್ದ, ಬೆಳಗ್ಗೆ ಸೈಕಲ್ಲಿನಲ್ಲಿ ಬಂದಿದ್ದ ಹುಡುಗನನ್ನು ಕರೆದು ''ಸ್ಟೇಷನ್‌ಗೆ ಹೋಗಿ ಚಿಕ್ಕಪ್ಪ ಅವರ ಹತ್ತಿರ ಎಂಟನೂರು ರೂಪಾಯಿ ತಗೊಂಡು, ಅರ್ಜೆಂಟ್ ಬರಬೇಕಂತೆ ಅಂತ ಹೇಳಪ್ಪ'' ಅಂದರು.

ಹುಡುಗ ತಬ್ಬಿಬ್ಬಾದ. ಜೊತೆಗೆ ಡಾಕ್ಟರ್ ಕೂಡಾ!

ಜಯದೇವ ಮುಂದುವರೆದು ಹೇಳಿದರು: ''ಇವರ ತಮ್ಮ, ನಮ್ಮ ಚಿಕ್ಕಮಾವ ಈ ಊರ ಸ್ಟೇಷನ್‌ನಲ್ಲೇ ಪೋಲಿಸ್ ಆಗಿದ್ದಾರೆ. ಅವರ ಹತ್ತಿರ ನಿಮಗೆ ಕೊಡಲು ದುಡ್ಡು ತರಲು ಹೇಳಿದ್ದೇನೆ. ಔಷಧಿ ಕೊಡಿ.''

ಪೋಲಿಸ್ ಶಬ್ಧ ಕಿವಿಗೆ ಬಿದ್ದಿದ್ದೇ ತಡ ಆ ಡಾಕ್ಟರ್ ಮಹಾಶಯ ಹರಡಿದ್ದ ಬಾಟಲಿ, ನಾರು–ಬೇರುಗಳನ್ನೆಲ್ಲಾ ಬ್ಯಾಗ್‌ನೊಳಗೆ ಅವಸರವಸರವಾಗಿ ತುರುಕಿಕೊಂಡು, ''ನಿಲ್ಲಿ... ನಿಲ್ಲಿ...'' ಅಂತ ಕೂಗುತ್ತಿದ್ದವರ ಕರೆಗೂ ಓಗೊಡದೇ ಬಸ್ಟಾಂಡ್ ಕಡೆ ಓಡಿ ಚಲಿಸುತ್ತಿದ್ದ ಬಸ್ ಏರಿ ಮಾಯವಾಗಿಯೇ ಬಿಟ್ಟರು!

ದಿನವಿಡೀ ಆ ಊರಿನಲ್ಲಿ, ಟೋಪಿವಾಲಾ ಡಾಕ್ಟರ್ ಪಲಾಯನದ್ದೇ ಮಾತು. ಹೊತ್ತು ಇಳಿಯುತ್ತಿದ್ದರೂ ಸುದ್ದಿ ತಣಿದಿರಲಿಲ್ಲ. ಅಷ್ಟರಲ್ಲಿ ನೆರೆಯೂರಿನ ಹಿರಿಯ ಬಸಪ್ಪನ ಆಗಮನವಾಯ್ತು.

''ನಮಸ್ಕಾರ ಮೇಷ್ಟ್ರೇ, ನಿಮ್ಮನ್ನೇ ನೋಡಣಾಂತ ಬಂದೆ.'' ಬಿಚ್ಚಿದ, ಬಣ್ಣಕಳೆದುಕೊಂಡು ಬೆಳಚಾಗಿದ್ದ ಕೊಡೆಯನ್ನು ಮಡಚಿ, ಬಗಲಲ್ಲಿರಿಸಿಕೊಂಡು ಎದುರಿನ ಕುರ್ಚಿಯಲ್ಲಿ ಕೂರೂತ್ತಾ ಹೇಳಿದರು.

''ಏನ್ ವಿಶೇಷ ಬಸಪ್ಪ?'' ಮೇಷ್ಟ್ರು ಆತ್ಮೀಯವಾಗಿ ವಿಚಾರಿಸಿದರು.

''ಏನಿಲ್ಲಾ, ಬೆಳಗ್ಗೆ ನೀವು ಮಂಡಿ ನೋವಿಗೆ ಔಷಧಿ ತೆಗೆದುಕೊಂಡ್ರಿಯಂತಲ್ಲಾ, ಆ ಡಾಕ್ಟ್ರು ನಮ್ಮಲ್ಲಿಗೂ ಬಂದು, ನೀವು ದುಡ್ಡು ಕೊಟ್ಟು, ಔಷಧಿ ಖರೀದಿಸಿದ ಬಗ್ಗೆ ಹೇಳಿದರು. ನೀವು ತೆಗೆದುಕೊಂಡಿದ್ದೀರಿ ಅಂದ ಮೇಲೆ ಒಂದು ಕೈ ನೋಡೇಬಿಡಣಾಂತ ನಾನೂ ಒಂದು ಬಾಟ್ಲಿ ಖರೀದಿಸಿಯೇ ಬಿಟ್ಟೆ! ಒಟ್ನಲ್ಲಿ ಮಂಡಿನೋವಿನ ಪೀಡೆಯಿಂದ ಪಾರಾದ್ರೆ ಸಾಕು, ಅಲ್ವಾ ಮಾರಾಯ್ರೇ'' ಎಂದರು.

''ಎಷ್ಟು ಕೊಟ್ರಿ?'' ತಳಮಳದಿಂದ ಕೇಳಿದರು ಜಯದೇವ.

''ಎರಡು ಸಾವಿರ ಹೇಳಿದರು. ಅವರು ಕೇಳಿದಷ್ಟು ಕೊಡೋಕೆ ನಾನೇನು ಕಮಂಗಿಯಾ? ಸಾವಿರ ಎಂದೆ. ಕೊನೆಗೆ ಚೌಕಾಶಿ ಮಾಡಿಮಾಡಿ ಸಾವಿರದೈನೂರಕ್ಕೆ ಕೊಟ್ಟು ಹೋದರು. ನೀವೂ ಅಷ್ಟೇ ಕೊಟ್ಟದ್ದಂತಲ್ಲಾ? ಆಯುರ್ವೇದ ಈ ಕಾಯಿಲೆಗೆ ಬಹಳ ಪವರ್ ಫುಲ್ ಔಷಧ ಅಂತೆ. ಹೌದಾ ಮಾರಾಯ್ರೇ!?'' ಎದೆಯುಬ್ಬಿಸಿ ಪ್ರಶ್ನಿಸಿದರು ಬಸಪ್ಪ. ಮಾವ-ಅಳಿಯ, ಇಬ್ಬರು ಮುಖಮುಖ ನೋಡಿಕೊಂಡರು!

ಮೇಷ್ಟ್ರು ಹೆಸರು ಹೇಳಿ ಡಾಕ್ಟರ್ ಟೋಪಿವಾಲಾ ನೆರೆಯೂರಿನಲ್ಲಿ ತನ್ನ ಕರಾಮತ್ತು ನಡೆಸುವಲ್ಲಿ ಯಶಸ್ವಿಯಾಗಿದ್ದ!

---

**ದೊಡ್ಡ ದೊಡ್ಡ ವಸ್ತುಗಳಿಗಿಂತ, ದೊಡ್ಡ ದೊಡ್ಡ ಸಮಸ್ಯೆಗಳಿಗಿಂತ ಚಿಕ್ಕ ಚಿಕ್ಕ ಸಮಸ್ಯೆಗಳೇ ನಮಗೆ ನೋವು ಕೊಡೋದು ಜಾಸ್ತಿ.**

**ಉದಾಹರಣೆಗೆ –**

**ನೀವು ಬೆಟ್ಟದ ಮೇಲೆ ಕೂತರೆ ನೋವಾಗುವುದಿಲ್ಲ. ಅದೇ ಒಂದು ಗುಂಡು ಸೂಜಿಯ ಮೇಲೆ ಕೂತರೆ ಚುಚ್ಚುತ್ತದೆ.**

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

– ದಂನಆ

- ಇದು ಮಳೆಗಾಲ ಎಂದ ಮೇಲೆ *it's raining coughs and colds* ಎಂದು ಹೇಳಬಹುದು.
- ಮರ್ಯಾದೆ ಬಿಟ್ಟು ದುಡ್ಡು ಮಾಡಬೇಕು. ದುಡ್ಡು ಮಾಡಿದ ಮೇಲೆ ಮರ್ಯಾದೆ ಹೇಗೂ ಸಿಕ್ಕೇ ಸಿಗುತ್ತೆ ಅಲ್ವೇ?
- ಖಾತಾ ರಹೆ ಮೇರಾ ದಿಲ್... ಎನ್ನುವವನು ತಿಂಡಿಪೋತನೇ ಇರಬೇಕು.
- *Advertising is institutionalised lying.*
- ಸೋಲಿನ ಭೀತಿಯಿಂದ ಹೊರಬರುವುದೇ ನಿಜವಾದ ಗೆಲುವು.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಷೇರು ಮಾರುಕಟ್ಟೆಯ ತಮಾಷೆ ಎಂದರೆ ಮಾರುವವರು ಲಾಭ ಮಾಡಿಕೊಳ್ಳಲೆಂದೇ ಮಾರಿದರೆ ಅದನ್ನು ಕೊಳ್ಳುವವರು ಲಾಭ ಮಾಡಿಕೊಳ್ಳಲೆಂದೇ ಕೊಳ್ಳುತ್ತಾರೆ. ಇಬ್ಬರೂ ತಾವು ಬುದ್ಧಿವಂತರೆಂದೇ ಭಾವಿಸುತ್ತಾರೆ.
- ಹೂಗಳ ಬೆಲೆ ಏರಿದರೂ ಪರಿಮಳ ಉದಾರ.
- *The real secret to getting things done is knowing what things need to be left undone.*
- ಬಾಲ್ಯಾವಸ್ಥೆ ಎಂದರೆ ಕುಡಿದು ಮತ್ತಿನಲ್ಲಿರುವುದು. ನೀನು ಏನು ಮಾಡಿದೆ ಎಂದು ಎಲ್ಲರಿಗೂ ಗೊತ್ತಿರುತ್ತದೆ, ನಿನ್ನೊಬ್ಬನನ್ನು ಬಿಟ್ಟು.
- ಬೆಳಿಗ್ಗೆ ಎದ್ದದ್ದು ಸರಿಯಾಗಿರಲಿಲ್ಲ ಎಂದ ಮಾತ್ರಕ್ಕೆ ಇಡೀ ದಿನ ಮುಖ ಗಂಟು ಹಾಕಿಕೊಂಡಿರಬೇಕು ಎಂದೇನಿಲ್ಲ.
- ಆದರ್ಶ ಗುರುವಿನ ಹುಡುಕಾಟದಲ್ಲಿ ನಿನ್ನನ್ನು ನೀನೇ ಕಳೆದುಕೊಳ್ಳಬೇಡ. ಅದರ ಬದಲು ಸರಿಯಾದ ವಿದ್ಯಾರ್ಥಿಯಾಗು.
- ಹಿಂದೆಲ್ಲಾ ಭಯಂಕರ ಸಮಾಚಾರಕ್ಕೆ ಜನ ತತ್ತರಿಸುತ್ತಿದ್ದರು. ಆದರೆ ಈಗ ಯಾವ ಸಮಾಚಾರವಾದರೂ ಸರಿ ಜನ ಟ್ವಿಟ್ಟರಿಸುತ್ತಾರೆ.

# ಯಾರು ಅಡ್ರೆಸ್ ಹೇಳಿದ್ದು

**- ಬೇಲೂರು ರಾಮಮೂರ್ತಿ**

**ನ**ಮ್ಮ ಸೋಮು ಮೊನ್ನೆ ಬೆಂಗಳೂರಿನ ನೋಡದೇ ಇರೋ ಏರಿಯಾಕ್ಕೆ ಹೋಗಿ ಅವರ ದೂರದ ನೆಂಟರ ಮನೆ ಹುಡುಕಿದ. ಆಗ ಅವನು ಒಂದೈದಾರು ಜನರನ್ನು ಅಡ್ರೆಸ್ ಕೇಳಬೇಕಾಗಿ ಬಂತು. ಸೋಮು ಸರ್, ಇಲ್ಲಿ ಪೈಂಟರ್ ವಾಸುದೇವರಾವ್ ಮನೆ ಎಲ್ಲಿದೆ ಗೊತ್ತಾ ಅಂತ ಕೇಳಿದ್ದಕ್ಕೆ ಯಾರ‍್ಯಾರು ಯಾವ್ಯಾವ ರೀತಿ ಅಡ್ರೆಸ್ ಹೇಳಿದ್ರು ಗೊತ್ತಾ!

1. ಸೀದಾ ಹೋಗಿ ಅಲ್ಲಿ ಶಿವ ವೈನ್ಸ್ ಅಂತ ಇದೆ ಅಲ್ಲಿ ಬಲಕ್ಕೆ ತಿರುಕ್ಕೊಳಿ, ಎದುರಿಗೇ ಸ್ಟಾರ್ ಬಾರ್ ಅಂಡ್ ರೆಸ್ಟೋರೆಂಟ್ ಅಂತ ಇದೆ, ಅಲ್ಲಿಂದ ಮೂರನೇ ಕ್ರಾಸ್‌ಗೆ ಹೋಗಿ ಅಲ್ಲಿ ನಳಿನಿ ಲಿಕ್ಕರ್ ಷಾಪ್ ಇದೆ, ಹಾಗೇ ಮುಂದಕ್ಕೆ ಹೋದರೆ ಅಲ್ಲಿ ರಾಘವೇಂದ್ರ ಬೀರ್ ಷಾಪ್ ಕಾಣಿಸುತ್ತೆ ಅಲ್ಲಿಂದ ನಾಲ್ಕನೇ ಮನೇನೇ ವಾಸುದೇವರಾವ್ ಅವರದ್ದು.

2. ಒಂದ್ ಕೆಲಸ ಮಾಡಿ ಸರ್. ಇಲ್ಲಿಂದ ಒಂದು ಫರ್ಲಾಂಗ್ ಹೋದರೆ ಅಲ್ಲಿ ಶ್ರೀಮತಿ ಸಿಲ್ಕ್ಸ್ ಇದೆ ಅಲ್ಲಿ ಎಡಕ್ಕೆ ತಿರುಕ್ಕೊಳಿ, ಸ್ವಲ್ಪ ಮುಂದೆ ಹೋದ್ರೆ ಹೋಲ್ ಸೇಲ್ ಬ್ಲೌಸ್ ಪೀಸ್ ಸೆಂಟರ್ ಕಾಣಿಸುತ್ತೆ, ಅದರ ಎದುರಿಗೆ ಒಂದು ರಸ್ತೆ ಇದೆ. ಅಲ್ಲಿ ಎಡಕ್ಕೆ ಪೆಟ್ಟಿಕೋಟ್ ಅಂಗಡಿ ಕಾಣಿಸುತ್ತೆ ಅಲ್ಲಿಂದ ಸೀದ ಹೋದ್ರೆ ಬೈ ಒನ್ ಟೇಕ್ ಒನ್ ಸ್ಯಾರಿ ಷಾಪ್ ಇದೆ. ಅಲ್ಲಿ ಹೋಗಿ ಯಾರನ್ನು ಕೇಳಿದರೂ ಪೈಂಟರ್ ವಾಸುದೇವ ಅವರ ಮನೆ ತೋರಿಸ್ತಾರೆ.

3 ನೋಡಿ ಸರ್ ಈ ರಸ್ತೆ ಕೊನೇಲಿ ಡೈಮಂಡ್ ಹೇರ್ ಕಟಿಂಗ್ ಸೆಲೂನ್ ಇದೆ. ಅಲ್ಲಿಂದ ಸ್ವಲ್ಪ ಮುಂದೆ ಹೋಗಿ ಎಡಗಡೆ ಸ್ವಾಮಿ ಹೇರ್ ಡ್ರೆಸ್ಸರ್ಸ್ ಇದೆ. ಅದರ ಪಕ್ಕದ ರಸ್ತೇಲಿ ನೇರ ಹೋಗಿ ನಿಮಗೆ ಬಲಗಡೆ ಅಜಂತಾ ಹೇರ್ ಸ್ಟೈಲ್ಸ್ ಕಾಣುತ್ತೆ ಹಾಗೇ ಮುಂದೆ ಹೋದರೆ ಅಲ್ಲಿ ಪ್ಲೆಷರ್ ಷೇವ್ ಕಾರ್ನರ್ ಇದೆ. ಅಲ್ಲಿಂದ ಮೂರನೇ ಮನೇನೇ ಪೈಂಟರ್ ಅವರದ್ದು.

4 ಅಯ್ಯೋ ಪೈಂಟರ್ ವಾಸುದೇವರಾವ್ ಮನೇನಾ ನೋಡಿ ಎದುರಿಗೆ ವೆಂಕಟರಮಣ ಸ್ವಾಮಿ ದೇವಸ್ಥಾನ ಕಾಣುತ್ತಲ್ಲ ಅಲ್ಲಿ ಬಲಕ್ಕೆ ತಿರುಕ್ಕೊಳಿ, ಮುಂದೆ ಹೋದ್ರೆ ರಸ್ತೆ ಬದೀಲಿ ಒಂದು ಸಣ್ಣ ಗಣೇಶನ ದೇವಸ್ಥಾನ ಇದೆ. ಅಲ್ಲಿಂದ ಹಾಗೆ ಮುಂದೆ ಹೋದ್ರೆ ಎದುರಿಗೇ ನಿಮಗೆ ಕನ್ನಿಕಾ ಪರಮೇಶ್ವರಿ ಗುಡಿ ಕಾಣಿಸುತ್ತೆ ಅಲ್ಲಿ ಎಡಕ್ಕೆ ತಿರುಕ್ಕೊಳಿ, ಒಂದು ಹತ್ತು ಹೆಜ್ಜೆ ಮುಂದೆ ಹೋದರೆ ರಾಘವೇಂದ್ರ ಸ್ವಾಮಿಗಳ ಗುಡಿ ಕಾಣಿಸುತ್ತೆ. ಅದರ ಎದುರಿನ ರಸ್ತೇಲಿ ಎರಡನೇ ಮನೇನೇ ಅವರದ್ದು.

5 ಅದೇನು ಕಷ್ಟಸಾರ್, ಅಲ್ಲಿ ನೋಡಿ ಎಲ್.ಐ.ಸಿ. ಆಫೀಸ್ ಕಾಣುತ್ತಲ್ಲ ಅಲ್ಲಿಂದ ಮುಂದೆ ಹೋಗಿ, ಅಲ್ಲಿ ಬಿರ್ಲಾ ಲೈಫ್ ಇನ್‌ಷೂರೆನ್ಸ್ ಕಾಣುತ್ತೆ ಅದರ ಎದುರಿನ ರಸ್ತೇಲಿ ಹೋಗಿ

ಅಲ್ಲಿ ಐಸಿಐಸಿಐ ಇನ್‌ಷೂರೆನ್ಸ್ ಆಫೀಸ್ ಕಾಣುತ್ತೆ ಹಾಗೇ ಮುಂದೆ ಹೋದರೆ ಟಾಟಾ ಏಇಜಿ ಲೈಫ್ ಇನ್‌ಷೂರೆನ್ಸ್ ಆಫೀಸ್ ಕಾಣಿಸುತ್ತೆ ಹಾಗೆ ಮುಂದೆ ಹೋದರೆ ಇಲ್ಲಿ ಎಲ್ಲಾ ವಿಧವಾದ ವಿಮೆಗಳನ್ನೂ ಮಾಡಿಸಲಾಗುತ್ತೆ ಅಂತ ಒಂದು ಮನೆ ಮುಂದೆ ಬೋರ್ಡ್ ಇದೆ ಅದರ ಎದುರಿನ ಮನೇನೇ ಪೈಂಟರ್ ವಾಸುದೇವರಾವ್ ಅವರದ್ದು.

6 ಏನು ಮಾಡಬೇಡಿ ಸರ್ ಸೀದ ಹೋಗಿ ಅಲ್ಲಿ ಬಿರ್ಲಾ ಸಿಮೆಂಟ್ ಅಂಗಡಿ ಕಾಣಿಸುತ್ತೆ, ಅದರ ಎದುರಿಗೆ ಹೋಗಿ ಅಲ್ಲಿ ಒಂದು ಬಿಲ್ಡಿಂಗ್ ಕೆಲಸ ನಡೀತಾ ಇದೆ ಹಾಗೆ ಮುಂದೆ ಹೋಗಿ, ಇಲ್ಲಿ ಬೋರ್ ವೆಲ್ ತೆಗೆಯುವವರು ಸಿಗುತ್ತಾರೆ ಅಂತ ಒಂದು ಬೋರ್ಡ್ ಕಾಣಿಸುತ್ತೆ ಅಲ್ಲಿಂದ ಬಲಕ್ಕೆ ತಿರುಗಿದರೆ ಇಂಡಿಯಾ ಸ್ಟೀಲ್ ಸೆಂಟರ್ ಕಾಣಿಸುತ್ತೆ ಹಾಗೇ ಮುಂದೆ ಹೋಗಿ, ಅಲ್ಲಿ ಬಲಗಡೆ ಒಂದು ಇಟ್ಟಿಗೆ ರಾಶಿ ಹಾಕ್ಕೊಂಡು ಮಾರ್ತಾ ಇರ್ತಾರೆ ಅದರ ಸಂದೀಲಿ ನಾಲ್ಕನೇ ಮನೇನೇ ಅವರದ್ದು.

ಇಷ್ಟಾಗೋ ಹೊತ್ತಿಗೆ ಸೋಮು ಸುಸ್ತಾಗಿದ್ದ. ಅವನ ಗ್ರಹಚಾರ ಚೆನ್ನಾಗಿತ್ತು. ಪೈಂಟರ್ ವಾಸುದೇವ್ ಅವರೇ ಎದುರಿಗೆ ಸಿಕ್ಕಿ ಸೋಮುನ ಮನೇಗೆ ಕರೆದುಕೊಂಡು ಹೋದರು.

*(ಅಡ್ರೆಸ್ ಹೇಳಿದ್ದು ಯಾರು ಅಂತ ಗೊತ್ತಾಗಬೇಕಾದರೆ ಕಡೇ ಪುಟ ನೋಡಿ)*

✺

---

ನಮ್ಮ ಹತ್ತು ವರ್ಷದ ಚಂದಾದಾರರೊಬ್ಬರಾದ ಶ್ರೀ ಕೆ.ಎನ್. ಅನಂತರಾಮಯ್ಯ ಅವರು ಅಪರಂಜಿಗೆ ರೂ. 1000/- (ರೂಪಾಯಿ ಒಂದು ಸಾವಿರ) ಚೆಕ್ಕ ಕಳಿಸಿ ಹೀಗೆ ಬರೆಯುತ್ತಾರೆ. ಅಪರಂಜಿಯನ್ನು ಇಷ್ಟು ಕಾಲ ಮತ್ತು ಮುಂದೆ ಮತ್ತಷ್ಟು ಕಾಲ ಓದುವುದಕ್ಕೆ ಅಂದಿನ ಚಂದಾ ಬಹಳ ಕಮ್ಮಿ ಎಂದು ನನ್ನ ಅನಿಸಿಕೆ. ಆದ್ದರಿಂದ ನನ್ನ ಕೈಲಾದ ರೂ. 1000/- (ರೂಪಾಯಿ ಒಂದು ಸಾವಿರ) ಇದರೊಂದಿಗೆ ಕಳಿಸಿದ್ದೇನೆ. ಅಪರಂಜಿಯು ಚಿರಕಾಲ ಕನ್ನಡಿಗ ಹಾಸ್ಯಪ್ರಿಯರನ್ನು ಸಂತೋಷಪಡಿಸಲಿ.

ಶ್ರೀ ಅನಂತರಾಮಯ್ಯನವರಿಗೆ ಅಪರಂಜಿಯು ಧನ್ಯವಾದ ತಿಳಿಸುತ್ತಾ ಇಂಥಾ ಸಹೃದಯರು ಅಪರಂಜಿ ಬಳಗಕ್ಕೆ ಇನ್ನಷ್ಟು ಮತ್ತಷ್ಟು ಬರಲಿ ಎಂದು ಹಾರೈಸುತ್ತಾಳೆ.

# ಅಂಬಕ್ಕನ ಬೂತ್

- ಪ್ರೊ. ಶ್ಯಾಮಲಾ ರವಿಶಂಕರ್

'**ಚು**ನಾವಣೆ' ಎಂಬ ಪದ ಪತ್ರಿಕೆಗಳಲ್ಲಿ ಪ್ರಕಟವಾದಂದಿನಿಂದ ಸರಕಾರೀ ನೌಕರರಿಗೆ ಆತಂಕಗಳು ಮೊದಲಾಗುತ್ತವೆ. ಯಾವುದೇ ಪ್ರಕಾರವಾದ ಕೆಲಸ ಚುನಾವಣೆಗೆ ಸಂಬಂಧಪಟ್ಟಂತಹದ್ದಾದರೆ, ತಮಗೆ ಮಾಡಬೇಕೆಂದು ಮೇಲಿಂದ ಆದೇಶ ಬಂದರೆ ಅದು ಮಾಡಲೇ ಬೇಕಾಗುತ್ತದೆ. ಅದು ಅಷ್ಟು ಅನಿವಾರ್ಯ. ಅಲ್ಲಿಗೂ ಮನುಷ್ಯಯತ್ನ ಮಾಡದೇ ಬಿಡುವುದಾ? ಯತ್ನ ಮಾಡೇ ಮಾಡುತ್ತಾರೆ. ತಪ್ಪಿಸಿಕೊಳ್ಳುವ ಯತ್ನಗಳನ್ನೂ, ಉಪಾಯಗಳನ್ನೂ ಹುಡುಕುವ ಸನ್ನಾಹ ನಡದೇ ಇರುತ್ತದೆ.

**ಅಭ್ಯರ್ಥಿಗಳಿಗೆ ಭವಿಷ್ಯವಾದರೆ**
**ಚುನಾವಣಾಧಿಕಾರಿಗಳಿಗೆ ಭೂತ**

ಅಂತಹದರಲ್ಲಿ ಒಂದು ಮೆಡಿಕಲ್ ರಜೆಯ ಮೇಲೆ ಹೋಗುವುದು ಹೇಳಿದಷ್ಟು ಸುಲಭವಲ್ಲ ಅದು. ಈ ಸರ್ಟಿಫಿಕೇಟನ್ನು ಸರಕಾರೀ ಆಸ್ಪತ್ರೆಯ ಸರ್ಜನ್ ಲೆವೆಲ್ ನವರೇ ಕೊಡಬೇಕು. ಅವರು ಇವಕ್ಕೆಲ್ಲಾ ಗೋಣು ಹಾಕುತ್ತಾರೆಯೋ? ಉಹುಂ! ಮತ್ತೆ ಉಳಿದಿರುವುದು? ಮಕ್ಕಳ ಮನೆಗೆ ವಿದೇಶ ಯಾತ್ರೆ! ಮುಂಚೆಯೇ ಈ ಯೋಜನೆ ಹಾಕಬೇಕು. ಎಲ್ಲರಿಗೂ ಇದು ಎಟುಕದ ಯೋಜನೆ. ಇನ್ನೊಂದು ಉಪಾಯವೆಂದರೆ ನಮ್ಮ ರ್‍ಯಾಂಕ್‌ನವರನ್ನೊಬ್ಬರನ್ನು - ಅದು ಯಾರುತಾನೆ ಒಪ್ಪುತ್ತಾರೆ? - ಅದೂ ಅವರಿಗೆ ದೈವವಶಾತ್ ಡ್ಯೂಟಿಗೆ ಕರೆಯದಿದ್ದರೆ, ಅವರೊಡನೆ ಕಲೆಕ್ಟರ್ ಆಫೀಸಿಗೆ ಹೋಗಿ ಅಲ್ಲಿನ ಆಫೀಸರ್‌ಗಳ ಒಪ್ಪಿಗೆ ಪಡೆದು ಇವರನ್ನು ನಮ್ಮ ಬದಲಾಗಿ ಆ ನನ್ನ ಕೆಲಸಕ್ಕೆ ಇವರನ್ನು ಸ್ವೀಕರಿಸಿ ಎಂದು ಹೇಳಿ ಕೈ ತೊಳೆದುಕೊಳ್ಳುವುದು. ಇದು almost next to impossible!

ಈ ಮಾತು ಬಂದಾಗ ಅತಿಯಾದ ಉದಾಹರಣೆಗೆ ನಾನು ಸಾಕ್ಷಿಯಾದೆ: 'ನನ್ನ ಸಹೋದ್ಯೋಗಿ ಒಬ್ಬರು ತಮ್ಮ ಪತಿದೇವರನ್ನ - ಅವರೂ ಇನ್ನೊಂದು ಡಿಪಾರ್ಟ್‌ಮೆಂಟಿನಲ್ಲಿ ಪ್ರೊಫೆಸರ್ - ನೀವು ನನ್ನ ಪರವಾಗಿ ಹೋಗುತ್ತೀರಾ ಎಂದು ಕೇಳಿದರಂತೆ. 22 ವರ್ಷಗಳ ದಾಂಪತ್ಯಜೀವನ ನಡೆಸಿದ್ದರೂ ಎಲೆಕ್ಷನ್ ಡ್ಯೂಟಿಗೆ ಮಾತ್ರ ನಾನು ನಾನೇ, ನೀನು ನೀನೆ ಎಂಬ ದ್ವೈತ ಸಿದ್ಧಾಂತವನ್ನು ಹಿಡಿದು ಕೂತರಂತೆ ಆ ಮಹಾಶಯ! ಇದನ್ನು ಹೇಳುತ್ತಾ ಆಕೆಗೆ ಬಂದ ಕೋಪ ಅಷ್ಟಿಷ್ಟಲ್ಲ!'

ನಾನು ಮಾತ್ರ ಈ ಯಾವ ಚಾಣಾಕ್ಷತೆಯನ್ನೂ ಪಡೆದಿಲ್ಲವಾದ್ದರಿಂದ ಈ ಕೆಲಸಕ್ಕೆ ತೊಡಗುತ್ತಿದ್ದೆ. ಅಲ್ಲ ಅಲ್ಲ - ತೊಡಗಲೇಬೇಕಲ್ಲಾ ಅದಕ್ಕೆ. ಎಲ್ಲರಿಗೂ ತಿಳಿದಿರುವಂತೆ ಇದು ಬಹಳ tensionನ ಕೆಲಸ. ಜವಾಬ್ದಾರಿ ಬಹಳ. ಮೊದ ಮೊದಲು ಹೆದರುತ್ತಲೂ ಆಮೇಲೆ ಒಂದು ವಿಧವಾದ ವಿಧೇಯತೆಯಿಂದಲೂ, ಜಾಗರೂಕತೆಯಿಂದಲೂ ಮಾಡಿದ ಮೇಲೆ ಬರುವ ತೃಪ್ತಿ ಹಾಗೂ ನಮ್ಮಲ್ಲಿ ನಮಗಿರುವ ಭರವಸೆ ಹೆಚ್ಚಿಸುವ ಸದವಕಾಶ ಇದು ಎನಿಸುತ್ತಿತ್ತು. ಏನೋ constitutional duty ಮಾಡಿದ ಭಾವ ನೆಮ್ಮದಿ ತರುತ್ತಿತ್ತು.

'ಹೈ ಟೆನ್ಶನ್ ಬೂತ್' ಒಂದರಲ್ಲಿ ನಾನು ಪ್ರಿಸೈಡಿಂಗ್ ಆಫೀಸರ್ ಆಗಿದ್ದೆ. ಪುಣ್ಯವಶಾತ್ ಈ ಟೆನ್ಶನ್ ಲೆವೆಲ್ ಕಾರ್ಯ ಮುಗಿದ ನಂತರ ನನಗೆ ತಿಳಿದದ್ದರಿಂದ ನನ್ನ ಟೆನ್ಶನ್ ಸಾಧಾರಣ ಮಟ್ಟದಲ್ಲೇ ಇತ್ತು.

ಹಿಂದೆರಡು ದಿವಸಗಳಿಂದಲೇ ನಮ್ಮ ಕ್ಯಾಂಪ್ ಪ್ರಾರಂಭ. ಒಂದು ದಿವಸದ ಮುಂಚೆ ನನ್ನ ಟೀಮಿನ ಮತ್ತಿತರರು ಬಂದು ಎಲ್ಲರೂ ಕನಿಷ್ಟ ಪಕ್ಷ 45 ಘಂಟೆಗಳವರೆಗೂ ಒಟ್ಟಾಗಿರಬೇಕು. ಅದೂ ಓಟಿಂಗ್ ಬೂತ್‌ನಲ್ಲಿ. ಸಾಮಾನ್ಯವಾಗಿ ಯಾವುದೋ ಹಳೇ ಸ್ಕೂಲು ಕಟ್ಟಡ ಸ್ನಾನಾದಿಗಳಿಗೆ ಬಿಲ್‌ಕುಲ್ ಅವಕಾಶವಿಲ್ಲ. ಇದರ ಜೊತೆಗೆ ನನಗಿದ್ದ ಇನ್ನೊಂದು ಹೆಂಗಳೆಯಳು (ಇಂಕ್ ಚುಕ್ಕೆ ಇಡುವುದಕ್ಕೆ ಹೆಂಗಸೇ ಇರಬೇಕೆಂದು – ಅದೂ ಹೆಂಗಸರ ಬೂತ್ ಆಗಿದ್ದರಿಂದ) ತನಗೆ ಚಿಕ್ಕ ಮಗುವಿದ್ದುದರಿಂದ ರಾತ್ರಿ ಕಳೆದು ಸೂರ್ಯೋದಯಕ್ಕೆ ಮುಂಚೆ ಬರುತ್ತೇನೆ. ನನಗೆ ಅನುಮತಿ ನೀಡಿ ಎಂದಳು. ಅವಳ ಗಂಡನೂ ಬಂದು ಕೈ ಕೈ ಹಿಸ್ಕೊಳ್ತಾ ಬಿನ್ನವಿಸಿದ. ಬಹಳ ಯೋಚಿಸಿ ಅನುಮತಿ ಇತ್ತೆ. ತೆಗೆದುಕೊಳ್ಳಿ! ನಮ್ಮ ಟೀಮಿನವರು ನನ್ನ ಮೇಲೆ ತೋರಿಸಿದ ಅಸಂತೃಪ್ತಿ ಅಷ್ಟಿಷ್ಟಲ್ಲ. ಮಾತು ಮಾತಿಗೂ, 'ಏನೋಪ್ಪ, ನೀವೇ ಕಳ್ಸಿದ್ರಿ, ನೀವೇ ಅನುಭವಿಸಿ' ಅನ್ನೋ ಹಾಗೆ ವರ್ತಿಸಿದರು. ಆ ಎಲ್ಲಾ ಯುವಕರನ್ನೊ ತಹಬಂದಿಗೆ ತರೋದ್ರಲ್ಲಿ ಅರ್ಧರಾತ್ರಿ ಕಳೆಯಿತು.

ಆಕೆಯೇನೋ ಕೋಳಿ 'ಕೊ ಕ್ಕೋ' ಅನ್ನೋಕ್ಮುಂಚೇನೆ ಬಂದ್ಬಿಟ್ಟು. ಆಕೆ ಸರ್ವಾಲಂಕಾರ ಭೂಷಿತಳಾಗಿ ಬಂದದ್ದನ್ನ ಸ್ನಾನ ಕೂಡ ಇಲ್ಲದೆ ಡ್ರೈವಾಷ್ ಹಾಗೂ ಮೇಕಪ್ ಮಾಡ್ಕೊಂಡ ನಮ್ಮ ತಂಡದ ಯುವಕರು 'ಮನೆಯಿಂದ ಬರೋವ್ರು ಏನಾದ್ರೂ ಕಾಫಿ–ತಿಂಡಿ ಕಟ್ಕೊಂಡು ಬರಬಾರ್ದಾ' ಅಂತ ಸಿಡುಕಿದರು. ಅಷ್ಟರಲ್ಲಿ ಬಂದ ವಿವಿಧ ಪಾರ್ಟಿ ಏಜೆಂಟರು, ಮೇಷ್ಟ್ರುಗಳೇ ಅವಕ್ಕೆಲ್ಲ ನಾವಿದ್ದೇವಲ್ಲ! ಅಂತ ಹಲ್ಲು ಗಿಂಜಿದರು.

'ಏನೂ ಪರವಾಗಿಲ್ಲ, ನಿಮಗೂ ನಾನೇ ತಿಂಡಿ–ಕಾಫಿ ತರಿಸ್ತೀನಿ, ಅದೆಲ್ಲ ನನ್ನ ಆತಿಥ್ಯ' ಎಂದು ಅವರ ಬಾಯ್ಮುಚ್ಚಿಸಿದೆ. ಈ ಖರ್ಚಿನ ಜೊತೆಗೆ ಆ ಹೆಂಗಸು ಬೇಗ ಬರಲೀಂತ ಗಣೇಶನಿಗೆ ಹರಕೆ ಬೇರೆ ಹೊತ್ತಿದ್ದೆ. ಅದಕ್ಕೆ ಸ್ವಲ್ಪ ಸಮಯ ಕೊಡ್ತಾನೆ ಗಣೇಶ, ಅಲ್ವಾ...?

ಅಂತೂ ನಮ್ಮ ತಂಡ ಸಂತುಷ್ಟಾಂತರಂಗರಾಗಿ ಕಾರ್ಯಚಾಲನೆಯಲ್ಲಿ ಸಹಕರಿಸಿದರು. ಏಜೆಂಟರೂ ಬಹಳ ಸಹಕರಿಸಿದರು ಅನ್ನಿ. ಓಟಿಂಗ್ ಮೊದಲಾಯಿತು. 5 ನಿಮಿಷಗಳಲ್ಲಿ ಸುಮಾರು 50 ವರ್ಷದ ಹೆಂಗಸು ಬಂದಳು. ತಲೆಗೂದಲು ಕೆದರಿದೆ. ಕೊಳಕಲು–ಹರಕಲು ಸೀರೆ. ಹಲ್ಲು ಉಜ್ಜಿದಂತೆಯೂ ಕಾಣಲಿಲ್ಲ, ಮುಖ ಎಲ್ಲಿ ತೊಳೆದಾಳು? ಬಂದವಳೇ, ''ನನ್ನ ಚೀಟಿ ಕೊಡಿ. ಬೇಗ. ಉಂ.. ಬೇಗ. ನಾನು ಬೇಗ ಹೋಗ್ಬೇಕು'' ಅಂತ ಅವಾಂತರ ಮಾಡಿದಳು. ಅವಳ ಚೀಟಿಯ ಪ್ರಕಾರ ಅವಳ ಹೆಸರು 'ಅಂಬಕ್ಕ ರಾಮಣ್ಣ'. ವಿಶೇಷವೇನೆಂದರೆ ಇದೇ ಹೆಸರು ನನ್ನ ಪಟ್ಟಿಯಲ್ಲಿ ಹಲವಾರು ಬಾರಿ ನಮೂದಿಸಲಾಗಿತ್ತು. ಸ್ವಲ್ಪ ವಿಚಿತ್ರದ ಹೆಸರು ಅಂದುಕೊಂಡೆ ಬೆರಗಾಯಿತು. ಈ ಹೆಸರಿನ ಪುನರಾವರ್ತನೆ ಇಂದ! ಆಕೆ ತಂದಿದ್ದ ಚೀಟಿಯ ಪ್ರಕಾರ ಅವಳ ಹೆಸರಿಗೆ ಇದ್ದ ಸಂಖ್ಯೆ ನನ್ನ ಪಟ್ಟಿಯಲ್ಲಿದ್ದ ಅನೇಕಾನೇಕ ಅಂಬಕ್ಕಗಳಲ್ಲಿ ಒಂದಕ್ಕೂ ಹೋಲಲಿಲ್ಲ. ಹೋಗೆಂದರೆ ಹೋಗಲೊಲ್ಲಳು.. ತಾನು ಓಟು

ಹಾಕೇ ಹೋಗುತ್ತೇನೆಂದು ಹಠ ಹಿಡಿದು ಪಟ್ಟಾಗಿ ಕೂತೇ ಬಿಟ್ಟಳು! ಕಡೆಗೆ ಏಜೆಂಟರು ಬೆದರಿಸಿ 'ಮುಖ, ಹಲ್ಲು ತೊಳೆದು ಬಾ, ಹಾಗೆ ಬೇರೆ ಚೀಟಿ ಕೂಡ ತಾ, ಇಲ್ಲದಿದ್ದರೆ ಪೋಲಿಸ್ ಅಮ್ಮನನ್ನು ಕರೆದು ಹೊರಗೆ ಹಾಕ್ತೀವಿ ನಿನ್ನನ್ನು' ಅಂದು ಆಕೆಯನ್ನು ಅಟ್ಟಿ ನನಗೆ ನೆರವಾದರು.

ಇನ್ನು ಸರಿಯಾಗಿ ಐದು ನಿಮಿಷ ಕಳೆದಿಲ್ಲ. ಚೆನ್ನಾಗಿ ಸಿಂಗರಿಸಿಕೊಂಡ ಹುಡುಗಿ, ಹೆರಳಿನ ಸುತ್ತ ಹೂವು ಮುಡಿದು, ಕಪ್ಪಾಗಿದ್ದ ಆರೋಗ್ಯಕರವಾಗಿದ್ದ ಮುಖಕ್ಕೆ ಕಣ್ಣು ಕಪ್ಪು, ಹಣೆಗೆ ತಿಲಕ, ವಿಭೂತಿ, ಗಂಧ ಎಲ್ಲವನ್ನೂ ಸಾವಧಾನವಾಗಿ ತೀಡಿ ತಿದ್ದಿ ನಗುನಗುತ್ತಾ ಬಂದಳು. ಅವಳ ಹೆಸರು ... ''ಅಂಬಕ್ಕ ರಾಮಣ್ಣ!'' ಏಕೋ ಏನೋ ಎಲ್ಲರೂ ಒಂದು ಕ್ಷಣ ಸ್ಥಂಭೀಭೂತರಾದ ಅನುಭವ. ಬೇಗನೇ ಚೇತರಿಸಿಕೊಂಡು ಕಾರ್ಯ ತತ್ಪರರಾದಿವಿ. ಆಕೆ ನಿರ್ಗಮಿಸಿದಳು.

ಸರಿಯಾಗಿ ಐದು ನಿಮಿಷ ಕಳೆಯಿತು. ಸೊಪ್ಪು ಮಾರುವಾಕೆ ಇರಬೇಕು. ಕೊತ್ತಂಬರಿ ಸೊಪ್ಪಿನ ವಾಸನೆ ಚಿಮ್ಮುತ್ತಾ ನನ್ನ ಹೆಸರು.. 'ಅಂಬಕ್ಕ ರಾಮಣ್ಣ' ಅಂದಳು. Isn't it a bit to much? ಅಂದ್ಕೊಂಡ್ವಿ. ಏನು coincidence ಅಲ್ವಾ. ಸರಿ ನಮ್ಮ ಕೆಲಸ ನಾವೂ, ಅವಳ ಕೆಲಸ ಅವಳೂ ಮಾಡಿ ಮುಗಿಸಿದ್ವಿ.

ಮುಂದಿನವಳು ಬುರ್ಖಾಧಾರಿ. ಬಹುಶಃ 'ಅಂಬಕ್ಕ' ಇರಲಿಕ್ಕಿಲ್ಲ, ಅಂದು ಕೊಂಡೆವು! ಇವಳ ತರಲೆ ಬೇಜಾನಾಗಿತ್ತು. ಯಾರೂ ಗುರ್ತಿಸಬಾರದು 'ಎಲ್ಲರೂ ಗಂಡಸರೇ' ಎಂದಳು. 'ನಾನಿದ್ದೀನಲ್ಲಾ? ಇಲ್ಲೇ ಬಾ' ಎಂದೆ. 'ಚುಕ್ಕೆ ಕೂಡ ನೀವೇ ಇಡಿ' ಅಂದಳು. 'ಇಲ್ಲ, ಅದಕ್ಕೆ ಇನ್ನೊಬ್ಬ ಹೆಂಗಸೇ ಇದ್ದಾರೆ' ಎಂದು ಮುಂದಕ್ಕೆ ಕಳಿಸಿದೆ.

ಇನ್ನೈದೇ ಐದು ನಿಮಿಷ, ಲಂಗ ದಾವಣಿ ಧಾರಿಣಿಯ ಪ್ರವೇಶ. ಹೆಸರು? yes, you guessed it!ಅದೇ, ಅಂಬಕ್ಕ ರಾಮಣ್ಣ! Oh, God. ಏನಾಗ್ತಿದೆ ನಮಗೆಲ್ಲ, ಅಲ್ಲಿ ಅಲ್ಲ, ನಮ್ಮ Boothನಲ್ಲಿ? Hallucinations for sure! ಅಂತ ಒಬ್ಬರಿಗೊಬ್ಬರು ಸಮಾಧಾನ ಹೇಳ್ಕೊಂಡ್ವಿ!

ಇಷ್ಟರಲ್ಲಿ ಅಲ್ಲಿನ ಕಾರ್ಪೊರೇಟರ್ ಅಂತೆ, ಅವರು ತಮ್ಮ ಸಶಸ್ತ್ರ ಅಂಗರಕ್ಷಕನೊಂದಿಗೆ ಬಂದು ಇಣುಕಿದರು. ನಾನೇ ಖುದ್ದಾಗಿ ಎದ್ದು ಹೋಗಿ, 'ಗಂಡಸರು ಬರುವಂತಿಲ್ಲ, ಸಶಸ್ತ್ರರಂತೂ ಖಂಡಿತಾ ಕೂಡದು ದಯಮಾಡಿ' ಎಂದು ನಮ್ರಳಾಗಿ ವಿನಂತಿಸಿದೆ. ತಮ್ಮ ಶಸ್ತ್ರ ಪ್ರಾಣಿ ಶಿಷ್ಯನನ್ನು ಹೊರಗಟ್ಟಿ ತಾವು ಒಂದೇ ಒಂದು ಹೆಜ್ಜೆ ಮುಂದಿಟ್ಟು 'ಎಲ್ಲಾ ಅನುಕೂಲವಾಗಿದೆಯೇ' ಎಂದು ಅಷ್ಟೇ ನಮ್ರತೆಯಿಂದ ವಿಚಾರಿಸಿ 'ನೀವು ರಿಸರ್ಚ್ ಮಾಡ್ತಿದ್ದಾಗ ನಾನು ಎಂ.ಎಸ್ಸಿ.ಲಿದ್ದೆ' ಎಂದು ಪರಿಚಯಿಸಿಕೊಂಡು ಕೈಮುಗಿದು ನಿರ್ಗಮಿಸಿದರು! 'ಹೀಗೂ ಇರ್ತಾರಾ ರಾಜಕಾರಣಿಗಳು?' ಅಂದ್ಕೊಳ್ತಿದ್ವಿ. ಅಷ್ಟರಲ್ಲಿ ಇನ್ನೊಬ್ಬ 'ಅಂಬಕ್ಕ ರಾಮಣ್ಣ' ಸಿದ್ಧಳಾಗಿ ನಿಂತಿದ್ದಾಳೆ. ನಮಗೆ ಹುಚ್ಚು ಹಿಡಿಯುವುದೊಂದು ಬಾಕಿ! 'ನಮಗೆ' ಅಂದ್ರೆ ಗೊತ್ತಾಯಿತಲ್ಲ, ನಮ್ಮ ತಂಡ ಮತ್ತು ಏಜೆಂಟರುಗಳೆಲ್ಲ ಇಷ್ಟು ಹೊತ್ತಿಗೆ ಒಂದೇ ಅನುಭೂತಿಯಲ್ಲಿ ಮುಳುಗಿದ್ದೆವು ಎಂದು?

ನಾನು ಈ ಹೆಸರಿನವರಿಗೆಲ್ಲ ಇದೇ ಬೂತ್ ಆ ಅನ್ನೋಧರ ನನ್ನ ಪಟ್ಟಿಯಲ್ಲಿ ಇನ್ನೂ ಎಷ್ಟು ಅಂಬಕ್ಕಗಳು ಓಟು ಹಾಕಲು ಮಿಕ್ಕಿದ್ದಾರೆ ಎಂದು ಎಣಿಸಲಾರಂಭಿಸಿದೆ. ಎಲ್ಲಾ ಕಡೆಯೂ ಅದೇ ಹೆಸರೇ ಕಾಣಿಸ್ತಾ ಇತ್ತು! ನನ್ನ ತಲೆ ಗಿರಿಗಿರನೆ ತಿರುಗುತ್ತಿತ್ತು!

ಎಷ್ಟೋ ಹೊತ್ತು ಹಾಗೇ ಇದ್ದೆ. ಯಾರೂ ಜನ ಒಳಗೆ ಬರಲಿಲ್ಲ, ಓಟು ಹಾಕುವ ಪುಣ್ಯ ಕಾರ್ಯಕ್ರಮ ಕಡೆಗೂ ಮುಕ್ತಾಯವಾಯಿತು.

ಎಲ್ಲಾ ಕಾರ್ಯಕ್ರಮ ಮುಗಿದ ಮೇಲೆ ಸೀಲ್‌ಗಳನ್ನೆಲ್ಲಾ ಹಾಕಿ, ವಾಹನಕ್ಕಾಗಿ ಕಾಯುತ್ತಿದ್ದ ನಮ್ಮ ತಂಡದಲ್ಲಿ 'bon homic' ಏರ್ಪಟ್ಟಿತ್ತು! ಅಲ್ಲಿದ್ದ ಪೋಲಿಸ್‌ನವರು ‘ಸದ್ಯ, ಈ ಹೈ ಟೆನ್ಶನ್ ಸೆಂಟರ್‌ನಲ್ಲಿ ಎಲ್ಲಾ ನಿರಾತಂಕವಾಗಿ ನಡೆಯಿತಲ್ಲ ಅಷ್ಟೇ ಸಾಕು’ ಎಂದು ನಿಟ್ಟುಸಿರುಬಿಟ್ಟರು. ‘ಹ್ಞಾ, ಇದು ಹೈ ಟೆನ್ಶನ್ ಪೋಲಿಂಗ್ ಸ್ಟೇಷನ್? ಆ ಮುಂಚೆ ಗೊತ್ತಾಗದಿದ್ದುದು ಆ ಗಣೇಶನ ದಯೆ’ ಅಂದೆ. ನಮ್ಮ ತಂಡದ ಯುವಕನೊಬ್ಬ ಪೋಲಿಸ್‌ನವರನ್ನು ಪ್ರಶ್ನಿಸಿದ. ‘ಏಕೆ ಹೈ ಟೆನ್ಶನ್?’ ಇಲ್ಲಿ ಯಾರಾದ್ರೂ ಅಂಬಕ್ಕ ರಾಮಣ್ಣ ಅನ್ನೋವ್ರು ಆತ್ಮಹತ್ಯೆ ಮಾಡಿಕೊಂಡ್ರಾ, ಹೇಗೆ ಅಂದ ಕುಚೋದ್ಯಕ್ಕೆ! ಎಲ್ರೂ ನಮ್ಮ ಕುರ್ಚಿಗಳಿಂದ ಒಂದೊಂದಡಿ ಹಾರಿದ್ವಿ ನೋಡಿ! ಪೋಲಿಸರಿಗೆ ನಗೂ ಅಂದ್ರೆ ನಗು!

✱




ನಾನು 'ಬರಹಗಾರ'ನೇ ಅಲ್ಲ ಅಂತೀರಲ್ಲಾ! ನಮ್ಮ ಮಂತ್ರಿಗಳಿಗೆ ಭಾಷಣ ಬರೆದು ಕೊಡುವವನೇ ನಾನು!!

# ವಾಸ್ತು ಎಂಬ ನಾನ್‌ಸೈನ್ಸ್

**- ಭಾರತಿ ಬಿ.ವಿ.**

**ನಾ**ವು ಒಂದಿಷ್ಟು ವರ್ಷಗಳ ಕೆಳಗೆ ಮನೆ ಬದಲಿಸಬೇಕಾಗಿ ಬಂದಾಗ ಆ ಎಸ್ಟೇಟ್ ಏಜೆಂಟ್ ಕೇಳಿದ್ದ 'ಇಲ್ಲೊಂದು ಮನೆ ಇದೆ ನೋಡ್ತೀರಾ? ವಾಸ್ತು ಒಂದು ಚೂರೂ ನೆಟ್ಟಗಿಲ್ಲ, ಪೂರ್ತಿ ವಿರುದ್ಧ ಇದೆ. ಅಂದರೆ ಎಲ್ಲೆಲ್ಲಿ ಏನಿರಬೇಕೋ ಅಲ್ಲಲ್ಲಿ ಅದು ಬಿಟ್ಟು ಇನ್ನೆಲ್ಲಾ ಇದೆ! ದೇವಮೂಲೇಲಿ ಅಡುಗೆಮನೆ ಇದೆ, ನಾರ್ತ್ ಈಸ್ಟ್‌ನಲ್ಲಿ ನೀರಿನ ಟ್ಯಾಂಕ್ ಇದೆ, ಸೌತ್ ಈಸ್ಟ್‌ಗೆ ಮನೆ ಬಾಗಿಲಿದೆ, ದೇವರ ಮನೆ ಬಾಗಿಲು ದಕ್ಷಿಣಕ್ಕಿದೆ... ಒಂದೂ ನೆಟ್ಟಗಿಲ್ಲ...'

ಅವನ ಮಾತು ಕಟ್ ಮಾಡಿ ನಾವು 'ಅದೆಲ್ಲ ಬಿಡಪ್ಪಾ ಓನರ್ ಜೊತೆಗಿದ್ದಾರಾ, ನೀರು ಬರತ್ತಾ ಅಷ್ಟು ಹೇಳು' ಅಂದೆವು. 'ನೀರು ಬರತ್ತೆ, ಓನರ್ ಜೊತೆಗಿಲ್ಲ...' ಅವನ ಮಾತು ಮುಂದುವರೀತಾ ಇತ್ತು. ನಾನು 'ನಡಿ ಮತ್ತೆ ಅಷ್ಟಿದ್ರೆ ಸಾಕು. ಆ ಓನರ್ ಒಬ್ರು ಪಕ್ಕ ಸೇರಿಕೊಂಡು ಗೇಟು ಹಾಕು, ಬಾಗ್ಲು ಹಾಕು, ಮೊಳೆ ಹೊಡೀಬೇಡ, ನೀರು ನಿಲ್ಲಿಸು ಅಂತ ತಲೆ ತಿನ್ನದಿದ್ರೆ ಸಾಕು. ಉಳಿದದ್ದೆಲ್ಲ ನಾನು ಅಡ್ಜಸ್ಟ್ ಮಾಡ್ಕೊಳ್ತೀನಿ. ಮೊದ್ಲು ನಡಿ ಅಲ್ಲಿಗೆ' ಅಂದೆ.

> **ಸಮಸ್ಯೆಗೊಂದು ಪರಿಹಾರ ಇದ್ದೇ ಇರತ್ತೆ.... ಅದು ನಾವು ಕೊಳ್ಳೋದಿಕ್ಕೆ ಹೊರಟಿದ್ದೀವೋ, ಮಾರೋದಿಕ್ಕೆ ಹೊರಟಿದ್ದೀವೋ ಅನ್ನೋದರ ಮೇಲೆ ಅವಲಂಬಿಸಿದೆ ಅಷ್ಟೇ!**

ಅವನು ಬಾಯಿ ಬಿಟ್ಟುಕೊಂಡು ನನ್ನ ನೋಡಿದ! ಈ ಮನೆಗೆ ಬಂದೆವಲ್ಲ... ಎಲ್ಲ ವಾಸ್ತು ವಿಕಾರಕ್ಕೂ ಒಂದು ಪರಿಹಾರವಿತ್ತು. ನಾನು ವಿತಂಡವಾದ ಮಾಡಲು ಹೊರಟೆ 'ಭೂಮಿ ಗುಂಡಗಿದೆ, ಅಂದ ಮೇಲೆ ಮೂಲೆ ಎಲ್ಲಿಂದ ಬರುತ್ತೆ?' ಅಂತೆಲ್ಲ. ಅಪ್ಪ ನನ್ನನ್ನು ತಡೆದು ಹೇಳಿದರು 'ದೇವ ಮೂಲೆ'ಯಲ್ಲಿ ನಾವು ಗ್ಯಾಸ್ ಇಡೋದೇ ಬೇಡ. ಒಂದಡಿ ಬಿಟ್ಟು ಈ ಪಕ್ಕಕ್ಕೆ ಇಡುವಾ ಅಂತ. ಅಲ್ಲಿಗೆ ದೇವಮೂಲೆ ಖಾಲಿ ಇದ್ದ ಹಾಗಾಯ್ತಲ್ಲ! ಅಲ್ಲಿಗೆ ಆ ದೋಷ ಪರಿಹಾರವಾದ ಹಾಗೆ ಆಯ್ತು! ಉಳಿದದ್ದು ಏನೂ ಮಾಡುವ ಹಾಗಿರಲಿಲ್ಲವಾದ್ದರಿಂದ ತೆಪ್ಪಗಾದ್ವಿ. ಈಗ ಆ ಮನೆಗೆ ಬಂದು 6 ವರ್ಷ ಆಯ್ತು. ಒಂದಿಷ್ಟು ಗೋಳು, ಒಂದಿಷ್ಟು ಒಳ್ಳೆಯದು ಎಲ್ಲ ಆಗಿದೆ. ಒಳ್ಳೆಯದು ಆಗಿದ್ದಕ್ಕೆ ಮನೆಗೆ ಕ್ರೆಡಿಟ್ ಕೊಡೋದಿಲ್ಲವಾದ್ದರಿಂದ ಕೆಟ್ಟದ್ದಕ್ಕೆ ಡೆಬಿಟ್ ಕೂಡಾ ಕೊಡೋದಿಲ್ಲ...

ನಮ್ಮದೊಂದು ಸೈಟು ಮಾರಾಟಕ್ಕೆ ಹೊರಟಿದ್ವಿ. ಏಜೆಂಟ್ ನೆರವು ತೆಗೆದುಕೊಳ್ಳಲೇಬೇಕು ತಾನೇ? ಅವನು ಅಲ್ಲಿ ಓಡುತ್ತಾ ಇರೋ ಬೆಲೆಗಿಂತ ಒಂದಿಷ್ಟು ಕಡಿಮೆ ಹೇಳಿದಾಗ ಲೆಕ್ಕಾಚಾರ ಎಲ್ಲ ತಲೆಕೆಳಗಾದ ಅನುಭವವಾಯ್ತು. ಯಾಕೆ ಹಾಗೆ ಅಂತ ವಾದಕ್ಕೆ ನಿಂತಾಗ 'ನಿಮ್ಮದು ಸೌತ್ ಫೇಸಿಂಗ್ ಸೈಟು ಸಾರ್... ಅದಕ್ಕೆ ಯಾವಾಗ್ಲೂ ಬೆಲೆ ಕಡಿಮೆ' ಅಂದ.

‘ಒಳ್ಳೆ ಕಥೆ ಆಯ್ತಲ್ಲ ನಿಂದು! ಹಾಗಿದ್ರೆ ಪ್ರಪಂಚದಲ್ಲಿ ಸೌತ್ ಫೇಸಿಂಗ್ ಸೈಟ್‌ಗಳೇ ಇಲ್ವೇನಯ್ಯಾ...’ ನನ್ನ ವಾದ ತುಂಡರಿಸಿ ಅಷ್ಟಕ್ಕೆ ಮಾತ್ರ ಹೋಗೋದು ಅಂತ ಕಡ್ಡಿ ಎರಡು ಮಾಡಿದ ಹಾಗೆ ಮಾತು ಮುಗಿಸಿಬಿಟ್ಟ, ಬೇರೇನು ಮಾಡೋ ಹಾಗಿದ್ದೆವು ಹೇಳಿ? ಹೇಳಿದಷ್ಟಕ್ಕೆ ಸೈಟು ಮಾರಿ ಕೈ ತೊಳೆದುಕೊಂಡಿದ್ದಾಯ್ತು. ಆಮೇಲೆ ಮತ್ತೊಂದು ಸೈಟ್‌ನ ಅನ್ವೇಷಣೆ ಶುರುವಾಯ್ತಲ್ಲ, ಆಗ ಆ ಏರಿಯಾದ ಏಜೆಂಟ್ ದಕ್ಷಿಣದ ಮುಖದ್ದೇ ಸೈಟು ತೋರಿಸಿದ. ಮತ್ತದು ಕಡಿಮೆಯಾ ಅಂತ ವಿಚಾರಿಸಿದರೆ... ಇಲ್ಲ, ಮಾಮೂಲಿ ರೇಟೇ ಹೇಳುತ್ತಾನೆ! ‘ಏ ಸೌತ್ ಫೇಸಿಂಗ್ ಅಲ್ವೇನಪ್ಪಾ.. ಕಡಿಮೆ ಮಾಡಕ್ಕೆ ಹೇಳು’ ಅಂದರೆ ‘ಏನ್ ಸಾರ್ ನೀವು... ಪ್ರಪಂಚದಲ್ಲಿ ಸೌತ್ ಫೇಸಿಂಗ್ ಸೈಟ್ ಇರದೇ ಎಲ್ಲ ನಾರ್ತ್ ಫೇಸಿಂಗೇ ಇರಕ್ಕೆ ಸಾಧ್ಯಾನಾ ಸಾರ್? ಪೂರ್ವಕ್ಕೆ ಬಾಗ್ಲು ಇಟ್ಕೊಂಡ್ರಾಯ್ತು’ ಅಂದ! ನೋಡಿ, ಸಮಸ್ಯೆಗೊಂದು ಪರಿಹಾರ ಇದ್ದೇ ಇರತ್ತೆ... ಅದು ನಾವು ಕೊಳ್ಳೋದಿಕ್ಕೆ ಹೊರಟಿದ್ದೀವೋ, ಮಾರೋದಿಕ್ಕೆ ಹೊರಟಿದ್ದೀವೋ ಅನ್ನೋದರ ಮೇಲೆ ಅವಲಂಬಿಸಿದೆ ಅಷ್ಟೇ!

ನಮ್ಮ ಮನೆ ಕಟ್ಟುವಾಗಲಂತೂ ತಲೆಯನ್ನು ಮೊಸರಿನ ಗಡಿಗೆ ಮಾಡಿಟ್ಟರು ಸುತ್ತಮುತ್ತಲಿದ್ದ ಛೋಟಾ ಮೋಟಾ ವಾಸ್ತುಶಾಸ್ತ್ರಜ್ಞರೆಲ್ಲ ಸೇರಿ! ಮನೆಗೆ 13 ಬಾಗಿಲು ಇರಬಾರದಂತೆ... 13 ಅಪಶಕುನದ ನಂಬರ್ ಅಂತೆ. ಇಲ್ಲಿ ಬಾಗಿಲಿಡಬೇಡಿ, ಅಲ್ಲಿ ಕಿಟಕಿ ಇರಕೂಡದು, ಇಲ್ಲಿ ತಗ್ಗು ಇರಬಾರದು, ಇಲ್ಲಿ ಭಾರ ಇರಬಾರದು... ಒಂದೇ, ಎರಡೇ!! ಎಲ್ಲಕ್ಕಿಂತ ಕಿರೀಟ ಪ್ರಾಯವಾದದ್ದು ಅಂದರೆ ಟಾಯ್ಲೆಟ್‌ನಲ್ಲಿ ಕಮೋಡ್ ಯಾವ ದಿಕ್ಕಿಗೆ ಇರಬೇಕು ಅಂತ ಹೇಳಿದ್ದು. ನಾನಂತೂ ಪಕ್ಕೆ ಹಿಡಿಯುವವರೆಗೆ ನಕ್ಕೆ. ಕಮೋಡ್‌ಗೂ ಒಂದು ದಿಕ್ಕು!! ಬೇರೆ ದಿಕ್ಕಿಗೆ ಕೂತರೆ ಆಗಬೇಕಾದ ಕೆಲಸ ಆಗೋಲ್ವಾ?! ತಾರಸಿಯ ಎತ್ತರ 10 ಅಡಿ, 12 ಅಡಿ ಹೀಗೆ ಸಮಸಂಖ್ಯೆ ಆಗಿರಬೇಕಂತೆ.... 11 ಅಥವಾ 13 ಅಡಿ ಆಗಿರಬಾರದಂತೆ. ಆಫೀಸಿನಲ್ಲಿ ಟೇಬಲ್ ಉತ್ತರ ದಿಕ್ಕಿಗೆ ಹಾಕಿರೋದ್ರಿಂದಲೇ ಬರಬೇಕಾದ ಬಾಕಿ ಹಣ ಬರುತ್ತಿಲ್ಲವಂತೆ. ಒಬ್ಬರು ಪರಿಚಿತರ ಮನೆಯಲ್ಲಿ ಸಂಪ್ ಇದ್ದ ಜಾಗದಲ್ಲಿ ನೀರು ಇರಬಾರದು ಅಂತ ಸಂಪನ್ನೇ ಮುಚ್ಚಿಸಿ ಹಾಕಿಬಿಟ್ಟಿದ್ದ ಒಬ್ಬ ವಾಸ್ತುಶಾಸ್ತ್ರಜ್ಞ! ಮನೆಯವರ ಆರೋಗ್ಯ ಸರಿ ಇಲ್ಲದ್ದಕ್ಕೆ ಟಾಯ್ಲೆಟ್ ಇದ್ದ ಜಾಗದಲ್ಲಿ ಇರಬಾರದು ಅಂತ ಟಾಯ್ಲೆಟ್ಟನ್ನು ಹಿತ್ತಲ ಬಾಗಿಲಿದ್ದ ಕಡೆ ವರ್ಗಾಯಿಸಿ ಹಿತ್ತಲ ಬಾಗಿಲನ್ನು ಟಾಯ್ಲೆಟ್ ಕಡೆ ಸರಿಸಿ ಇಟ್ಟಿದ್ದ ಕೂಡಾ! ನಾವಿದ್ದ ಬಾಡಿಗೆ ಮನೆಯ ಓನರ್ ಒಂದು ದಿನ ಇದ್ದಕ್ಕಿದ್ದ ಹಾಗೆ ತರಾತುರಿಯಿಂದ ಬಂದರು. ಹಿಂದೆಯೇ ಒಬ್ಬ ಗಾರೆಯವನು. ನಮ್ಮನೆ ಮೂರು ರಸ್ತೆಗಳು ಕೂಡುವಲ್ಲಿ ಇತ್ತಂತೆ... ಅದು ಅಶುಭ! ಅಲ್ಲಿ ವಾಸಿಸುವವರಿಗೆ ಕೆಟ್ಟದಾಗುತ್ತದಂತೆ! ನಮಗೆ ನಗಬೇಕೋ, ಅಳಬೇಕೋ ತಿಳಿಯಲಿಲ್ಲ. ಆ ಮನೆಯಲ್ಲಿ ನಾವು ಹತ್ತು ವರ್ಷದಿಂದ ಇದ್ದೆವು. ಏನಂದ್ರೆ ಏನೂ ಕೆಡುಕು, ಒಳ್ಳೆಯದು ಏನೂ ಆಗಿರಲಿಲ್ಲ. ಎಲ್ಲರ ಹಾಗೆ ನಮ್ಮ ಬದುಕೂ ಸಾಗಿತ್ತು. ಈಗ ಈ ಹೊಸಾ ವಿಷಯ! ಸರಿ ಮೂರು ದಾರಿ ಕೂಡುವಲ್ಲಿನ ಅಶುಭಕ್ಕೆ ಕೂಡಾ ಒಂದು ಪರಿಹಾರ ಇದ್ದೇ ಇರಬೇಕು ತಾನೇ? ಒಂದು ಸಣ್ಣ ಟೈಲ್... ಅದರ ಮೇಲೆ ಗಣೇಶನ ಚಿತ್ರ! ಅದನ್ನ ಗೋಡೆಯ ಮೇಲೆ ಮೆತ್ತಿದರಾಯ್ತು... ಎಲ್ಲ ಕೆಡುಕೂ ಹಾಗಿಂದ ಹಾಗೇ ವಾಪಸ್ ಹೋಗುತ್ತವಂತೆ! ಇಷ್ಟು

ಸುಲಭವಾ ಕೆಡುಕನ್ನ ದೂರ ಇಡೋದು? ನಮಗೆಲ್ಲ ನಗು. ನನ್ನ ತಲೆಹರಟೆ ಬುದ್ಧಿಗೆ ಸುಮ್ಮನಿರೋದು ನಿಜಕ್ಕೂ ಕಷ್ಟ 'ಅದು ಸರಿ ಹತ್ತು ವರ್ಷದಿಂದ ಇಲ್ಲೇ ಇದ್ದೀವಲ್ಲಾ ಏನೂ ಕೆಡಕು ಆಗಲಿಲ್ಲವಲ್ಲಪ್ಪಾ' ಅಂದೆ ಸಣ್ಣ ಅಪಹಾಸ್ಯದ ನಗುವಿನ ಜೊತೆ. ಅವನು ನಮ್ಮ ಮನೆ ಮೇಲೆ ನಿಲ್ಲಿಸಿದ್ದ ಒಂದು ಆನೆಯ ಬೊಂಬೆ ತೋರಿಸಿ 'ಇದು ಮತ್ತೆ ಗಣೇಶ ಎರ್ಡೂ ಒಂದೇ ಅಲ್ವಾ ತಾಯಿ! ಅದ್ಕೆ ಕೆಡ್ಕಾಗಿಲ್ಲ' ಅಂದ! ಭಪ್ಪರೇ ಮೇಸ್ತ್ರಿ ಅಂದುಕೊಂಡೆ. ಆ ಮನೆಯ ಹೆಸರು ಆನೆಮನೆ ಅಂತ. ಅದೆಂಥದ್ದೋ ಅವರ ಮನೆತನದ ಬಿಸಿನೆಸ್‌ನ ಲಾಂಛನವಂತೆ ಅದು. ಅದನ್ನ ಗಣೇಶನನ್ನಾಗಿ ಮಾರ್ಪಡಿಸಿಟ್ಟ ಮೇಸ್ತ್ರಿಯ ಜಾಣತನವನ್ನು ಮನಸಲ್ಲೇ ಮೆಚ್ಚಿದೆ. ಆಮೇಲೆ ಒಳಬಂದ ಅವನು 'ಓಓಓಓಓ... ನೋಡ್ರವ್ವಾ ಈ ಕಾರ್ ನಿಲ್ಸೋ ಗರಾಜು ತಗ್ಗಿನಾಗ್ಯೆತೆ. ಅದ್ಕೆ ಮತ್ತೆ ನಿಮ್ಮ ಕೆಡುಕನ್ನ ಹೊಡೆದು ಹಾಕಿ ವ್ಯಾಪಾರ ಚೆನ್ನಾಗಿ ಆಗೋ ಹಾಗೆ ಮಾಡಿದೆ' ಅಂದ. 'ಓಹೋ! ಅದೆಷ್ಟು ಸುಲಭ ಬಿಸಿನೆಸ್ ಉತ್ತಮವಾಗೋದು! ಸುಮ್ಮನೇ ಗರಾಜನ್ನು ತಗ್ಗಿನಲ್ಲಿ ಇಡಿಸಿದರಾಯ್ತು. ನಾನು, ನನ್ನ ಗಂಡ ಎಷ್ಟೊಂದು ಟೂರ್ ಎಲ್ಲ ಮಾಡಿ, ಆರ್ಡರ್ ಎಲ್ಲ ತಂದು, ಕಾಸು ಬರ್ಲಿಲ್ಲ ಅಂತೆಲ್ಲ ಹೊಡೆದಾಡಿದ್ವಲ್ಲಪ್ಪಾ. ಏನೂ ಮಾಡ್ದೇ ಸುಮ್ನೆ ಇದ್ರೂ ಅದೆಲ್ಲ ಆಗೇ ಆಗ್ತಿತ್ತು ಅಂತೀಯಾ?' ಅಂದೆ ವ್ಯಂಗ್ಯವಾಗಿ. ಅವನು ವಿಚಲಿತನಾಗದೇ 'ಇದು ತಗ್ನಾಗೆ ಇದ್ದಿದ್ಕೇ ನೀವು ಮಾಡಿದ್ದು ಫಲ ಕೊಡ್ತು ತಾಯಿ. ಇಲ್ಲಾಂದಿದ್ರೆ ನೀವು ಏನು ಮಾಡಿದ್ರೂ ಅಷ್ಟೇಯಾ' ಅಂದ! 'ಸರಿ ಮತ್ತೆ ಈಗ ಗಣೇಶನ್ನ ತಂದು ಕೂರಿಸಿದ್ಯಾಕೆ? ಗರಾಜೇ ಇದ್ಯಲ್ಲಾ ನಮ್ಮನ್ನ ಕಾಪಾಡಕ್ಕೆ?' ಅಂದೆ. 'ಅದು ಹಾಕಿದ್ಮೇಲೆ ನೋಡಿ ವ್ಯಾಪಾರ ದುಪ್ಪಟ್ಟಾಗ್ಯೆತೆ' ಅಂದ!! ಮುಂದೆ ಮಾತಾಡೋದು ವೇಸ್ಟ್ ಅಂತ ಸುಮ್ಮನಾದೆ....

ವಾಸ್ತುಶಾಸ್ತ್ರ ಹಳೆಯದು ಅನ್ನೋದು ಒಪ್ಪೋ ಮಾತೇ. ಆದರೆ ಎಲ್ಲ ರಂಗದಲ್ಲೂ ಕ್ವ್ಯಾಕ್‌ಗಳು ಇರೋ ಹಾಗೆ ಇಲ್ಲೂ ಸೇರಿಕೊಂಡು ಬಾಯಿಗೆ ಬಂದ ಸಲಹೆ ಕೊಡೋದ್ರಿಂದಲೇ ಇವೆಲ್ಲ ನಗೆಪಾಟಲಾಗಿದೆಯೇನೋ. ಒಂದು ದಿನ ಅಮ್ಮನ ಮನೆಗೆ ಹೋಗಿ ನೋಡಿದರೆ ಕಳ್ಳ ಗೋರಾಡಿ ಹೋದ ಮನೆಯ ಹಾಗೆ ಆಗಿಹೋಗಿದೆ! ಅಯ್ಯೋ ಏನಾಯ್ತು ಅಂತ ಗಾಬರಿಯಾಯ್ತು. ಆಮೇಲೆ ನೋಡಿದರೆ ಅವರ ಮನೆಗೊಬ್ಬ ವಾಸ್ತುಶಾಸ್ತ್ರಜ್ಞ ಬಂದಿದ್ದರು! ಅಮ್ಮ ನೇತು ಹಾಕಿದ್ದ ಕುದುರೆಯ ವಾಲ್ ಪೋಸ್ಟರ್ ಅಲ್ಲಿರಬಾರದು. ಕುದುರೆ ಚಂಚಲ. ಆ ಪೋಸ್ಟರ್ ಅಲ್ಲಿದ್ದರೆ ಮನಸ್ಸೂ ಚಂಚಲವಾಗುತ್ತದೆ ಅಂತ ಹೇಳಿ ಅದನ್ನ ಕೆಳಕ್ಕೆ ಕೆಡವಿಸಿದ್ದ. ಆನೆಯ ಚಿತ್ರವನ್ನ ಹಿಂದುಮುಂದಲಾಗಿಸಿ ನೇತು ಹಾಕಿಸಿದ್ದ. ಯಾಕೆ ಅಂದರೆ ಆ ಜಾಗದಲ್ಲಿ ಭಾರ ಇರಬಾರದಂತೆ!! ಆನೆ ಭಾರ ಅಂತ ಗೊತ್ತಿತ್ತು.. ಆನೆಯ ಪೋಸ್ಟರ್ ಕೂಡಾ?! ಅದ್ಯಾವುದೋ ಮೂಲೆಯಲ್ಲಿ ಒಂದು ಪಾಟ್ ಇಡಿಸಿದ್ದ... ಅಲ್ಲಿ ಭಾರ ಇರಬೇಕಂತೆ! ಪಾಟ್ ಭಾರದ ವಸ್ತುವಿನ ಲೆಕ್ಕಕ್ಕೆ ಸೇರಿತ್ತು! ಆಮೇಲೆ ನೋಡಿದರೆ ಅಲ್ಲಿ ನೆಗೆಟಿವ್ ಎನರ್ಜಿ ಇದೆಯಂತೆ. ಅದಕ್ಕೆ ಅದನ್ನು ಪಾಸಿಟಿವ್ ಎನರ್ಜಿ ಮಾಡೋದಿಕ್ಕೆ ಒಂದು ಪ್ಲಸ್ ಮಾರ್ಕು! ನಮಗೆ ನಗು ಉಕ್ಕಿ ಬಂದು ಉರುಳಾಡಿ ನಕ್ಕೆವು. ಆಮೇಲೆ ನಮ್ಮ ತರಲೆ ಬುದ್ಧಿ ಸುಮ್ಮನಿದ್ದೀತಾ? ನೆಗೆಟಿವ್ ಎನರ್ಜಿ ಇರುವಾಗ ಅಲ್ಲಿ + sign ಹಾಕಿದ್ರೆ (– ★ + = –) ಆಗಿ ಹೋಗತ್ತೆ... ಅದಕ್ಕೆ ಅಲ್ಲಿ ಮೈನಸ್ ಮಾರ್ಕ್

ಹಾಕ್ಬೇಕಿತ್ತು. ಆಗ (– ★ – = +) ಆಗ್ತಿತ್ತು ಅನ್ನೋ ನಮ್ಮ ತರಲೆ ವಾದಕ್ಕೆ ಅಮ್ಮ ಸೊಪ್ಪು ಹಾಕದೇ ಅದು ಗಣಿತ ಶಾಸ್ತ್ರ ಇದು ವಾಸ್ತುಶಾಸ್ತ್ರ ಅಂದಳು. ಅವಳೂ ಇದನ್ನೆಲ್ಲ ನಂಬುವವಳಲ್ಲವಾದ್ರೂ ನನ್ನ ಹಾಗಲ್ಲ.. ಅದೊಂದು + ಸೈನ್ ಹಾಕಿದ್ರೆ ಕಳ್ಕೊಳ್ಳೋದೇನು ಅನ್ನೋ ತರದವಳು. ಬದುಕುವ ಮಾರ್ಗ ತಿಳಿದವಳು ಅಂತ ಸುಮ್ಮನಾದೆ....

ಇದೆಲ್ಲ ಏನಾಗುತ್ತಿದೆ? ಕಾಲ ಮುಂದುವರೆಯುತ್ತಿದೆ.. ವಿಜ್ಞಾನ ಬೆಳೆದಿದೆ.. ಆದರೆ ಈ ಥರದ ನಂಬಿಕೆಗಳಿಗೆ ಮಾತ್ರ ಕೊನೆ ಮೊದಲಿಲ್ಲ. ದಿನ ಬೆಳಗಾದರೆ ಪೇಪರ್‌ನಲ್ಲಿ, ಟಿ.ವಿ.ಗಳಲ್ಲಿ ವಾಸ್ತುವಿನ ಬಗ್ಗೆ ಪುಟಗಟ್ಟಲೆ ಲೇಖನಗಳು. ಒಂದು ದಿನ ಟಿ.ವಿ.ಯಲ್ಲಿ ಎಂಥದ್ದೋ ಕಾರ್ಯಕ್ರಮ ವಾಸ್ತುವಿಗೆ ಸಂಬಂಧಿಸಿದ್ದು. ಯಾರೋ ಹುಡುಗ ಫೋನ್ ಮಾಡಿ 'ನಮ್ಮ ಮನೆ ಬಾಗಿಲು ಪೂರ್ವಕ್ಕಿದೆ. ಎರಡು ವರ್ಷದ ಕೆಳಗೆ ಕಟ್ಟುವಾಗ ಮೊದಲು ಅದು ಪಶ್ಚಿಮಕ್ಕಿತ್ತು. ಅಲ್ಲಿಟ್ಟರೆ ನಮ್ಮ ತಂದೆಯವರ ಆರೋಗ್ಯಕ್ಕೆ ತೊಂದರೆ ಆಗುತ್ತದೆ ಅಂತ ಹೇಳಿದರು. ಅದಕ್ಕೇ ಬಾಗಿಲನ್ನು ಪೂರ್ವಕ್ಕೆ ಇಡಿಸಿದೆವು..' (ನನಗೆ ಆ ದಿಕ್ಕುಗಳ ಹೆಸರುಗಳು ಸರಿಯಾಗಿ ನೆನಪಿಲ್ಲ). ಆ ಹುಡುಗನ ಮಾತು ಮುಗಿಯುವ ಮುಂಚೆಯೇ ಈ ವಾಸ್ತುಶಾಸ್ತ್ರಜ್ಞ 'ನಿಮ್ಮ ಹುಟ್ಟಿದ ದಿನಾಂಕ ಹೇಳಿ' ಅಂದ. ಆ ಹುಡುಗ ಹೇಳಿದ. ಈತ ಗುಣಿಸಿದ, ಭಾಗಿಸಿದ, ಕೂಡಿದ, ಕಳೆದ.... ಎಲ್ಲ ಮುಗಿದ ಮೇಲೆ 'ಒಳ್ಳೆಯದಾಯ್ತು. ನೀವು ಬದಲಿಸಿದ್ದು ತುಂಬ ಒಳ್ಳೆಯದಾಯ್ತು. ಒಂದು ದೊಡ್ಡ ಗಂಡಾಂತರದಿಂದ ಪಾರಾದಿರಿ. ನಿಮ್ಮ ತಂದೆಯವರ ಆರೋಗ್ಯಕ್ಕೆ ಇನ್ನು ಮುಂದೆ ಯಾವ ತೊಂದರೆಯೂ ಇರೋದಿಲ್ಲ' ಹೀಗೆ ಹೇಳುತ್ತಾ ಹೋದರು. ಆ ಹುಡುಗ ಮಧ್ಯೆ 'ಆದರೆ...' ಅನ್ನುವಷ್ಟರಲ್ಲಿ ಈತ ಅವನ ಮಾತನ್ನು ತುಂಡರಿಸಿ ಹೇಳೇ ಹೇಳಿದರು. ಎಲ್ಲ ಪಾಂಡಿತ್ಯ ಪ್ರದರ್ಶನವಾದ ಮೇಲೆ 'ಈಗ ತಂದೆಯವರ ಆರೋಗ್ಯ ಉತ್ತಮವಾಗಿರಬೇಕು' ಅಂದರು. ಆ ಹುಡುಗ ತಣ್ಣಗೆ 'ನಮ್ಮಪ್ಪ ಸತ್ತು ಹೋಗಿ ಒಂದೂ ಮುಕ್ಕಾಲು ವರ್ಷ ಆಯ್ತು' ಅಂದ...!! ಈ ಭಂಡ 'ನೋಡಪ್ಪಾ... ಬಾಗಿಲು ಬದಲಿಸಿದ್ದರಿಂದ ನಿಮ್ಮಪ್ಪನಿಗೆ ಸುಖವಾದ ಸಾವು ಬಂತು. ಇಲ್ಲಾಂದರೆ ಭಲೇ ನೋವಿನಿಂದ ಸಾಯ್ತಿದ್ದರು!' ಅಂದ.

ಇಲ್ಲಿ ನಿತ್ಯಾನಂದ ಕೂಡ ಯಾಕೆ ಸುಖವಾಗಿ ಬದುಕುತ್ತಾನೆ ಅನ್ನೋದು ನನಗೆ ಚೆನ್ನಾಗಿ ಅರ್ಥವಾಯ್ತು...

✺

---

**ನಮಗೆಲ್ಲ ಗೊತ್ತಿರುವ ಹಾಗೆ ನಿರಂತರವಾಗಿ ಕೆಲಸ ಮಾಡೋದು ಗಾಳಿ. ಪ್ರತಿ ಕ್ಷಣವೂ ಗಾಳಿ ಬೀಸುತ್ತಲೇ ಇರುತ್ತದೆ. ಒಂದು ಕ್ಷಣ ಗಾಳಿ ಬೀಸೋದು ನಿಲ್ಲಿಸಿದರೆ ಏನಾಗಬಹುದು? ಆದರೆ ಪೆಟ್ರೋಲ್ ಬಂಕ್ ಒಂದರ ಮುಂದೆ ಈ ರೀತಿ ಬೋರ್ಡ್ ಇತ್ತು – Air Not Working**



ಇದು ಸೂತ್ರದ ಗೊಂಬೆಯಾಟವಯ್ಯಾ !

ಇಂಟರ್ನೆಟ್ ಕೃಪೆ




Since 1998
**Whisper Hearing Aids**
Pvt. Ltd.
1030/13, 25 main, 39 cross,
4th 'T' block, Jayanagara, Bengaluru

SIEMENS
Authorised
Hearing Care
Centre

Avail **FREE** supply of batteries for a year
on purchase of hearing aids for this week.
10am - 1:30pm, 5pm - 8pm
Appointment : 26640571, 9741765454

**ಕಿವಿ – ಕೇಳುವ ಅಂಗವೇ ಆದರೂ ಅದರ ಒಂದು ಭಾಗ ನಮ್ಮ ದೇಹದ ಸಮತೋಲನ ಮಾಡುವ ಕೆಲಸ ನಿಭಾಯಿಸುತ್ತದೆ. ಕೇಳಿಸುವ ಭಾಗಕ್ಕೆ ತೊಂದರೆಯಾದರೆ ಕಿವುಡುತನ ಬರುತ್ತದೆ, ಹಾಗೆಯೇ ಉಳಿದ ಭಾಗಕ್ಕೆ ತೊಂದರೆಯಾದರೆ ತಲೆಸುತ್ತು ಕಿವಿಮೊರೆತ ಉಂಟಾಗುತ್ತದೆ. ಕಿವಿಮೊರೆತಕ್ಕೆ ಉಳಿದಂತೆ ಹಲವಾರು ಕಾರಣಗಳು ಇದ್ದರೂ ಈ ಸೂಕ್ಷ್ಮವಾದ ಅಂಗದ ತೊಂದರೆಯೇ ಬಹುಮಟ್ಟಿನ ಕಾರಣ. ಬಹಳ ಸಲ ಈ ತೊಂದರೆ ಔಷಧಿಗೆ ಒಗ್ಗದು. ಮೊರೆತ ಮುಚ್ಚುವಂತೆ ಶಬ್ದವನ್ನು ಹಿಯರಿಂಗ್ ಏಡ್ ಮೂಲಕ ಕೊಡಬೇಕಾಗುತ್ತದೆ. ಸದ್ಯಕ್ಕೆ ಅದೇ ಉತ್ತರ. ಕಿವಿಯ ಸೂಕ್ಷ್ಮತೆ ಕಡಿಮೆಯಾದ ನಂತರ ಹಿಯರಿಂಗ್ ಏಡ್ ಧರಿಸಿ ಎಲ್ಲರಂತೆಯೇ ಮಾತಿನ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಅದು ಸಾಮಾನ್ಯ ಜೀವನ.**

**ಡಾ|| ಜಿ. ಪುರುಷೋತ್ತಮ ಇಡಿ.ಡಿ.**
**ವಾಕ್ – ಶ್ರವಣದೋಷ ತಜ್ಞ, ವಿಸ್ಪರ್ ವಾಕ್ – ಶ್ರವಣ ಕೇಂದ್ರ**

# ಮನೆಯೊಂದು ಮೂರು ಬೀಗ

**- ನೀರಗುಂದ ಕೇಶವಮೂರ್ತಿ ರಾವ್**

**ಬಾ**ಗೂರಿನ ಬುರುಡೆ ಬಾಜೀರಾಯರ ಮನೆಯ ಇತಿಹಾಸ ಹೇಳಹೊರಟರೆ ಅದು ಎಂದೂ ಮುಗಿಯದ ಕತೆ. ಧಾರಾವಾಹಿಯಾಗಿ ಎಷ್ಟು ಎಪಿಸೋಡ್‌ಗಳಾದರೂ ಆಗಬಹುದು.

ಬುರುಡೆ ಬಾಜೀರಾಯರ ಪೂರ್ವಿಕರ ಕಾಲದ ಈ ಮನೆ ಪಿತ್ರಾರ್ಜಿತವಾಗಿ ಬುರುಡೆಯವರಿಗೂ, ತಮ್ಮ ಕಿತಾಪತಿಯವರಿಗೂ ಬಂತಷ್ಟೆ. ಬಾಲ್ಯದಲ್ಲೇ ಬಡಿದಾಡಿಕೊಂಡು ಬೇರೆಯಾದವರು ಈ ಮನೆಗೆ ಭಾರೀ ಬೀಗವೊಂದನ್ನು ಜಡಿದಿದ್ದರು. ಈ ಮನೆಯಾದರೋ ಬೆಂಗಳೂರಿನ ಬಿ.ಡಿ.ಎ. ನಿವೇಶನದಂತೆ '30 x 40' ಅಲ್ಲ. ಮುಂಭಾಗದ ಮೇನ್ ರೋಡಿನಿಂದ ಹಿಂಭಾಗದ ಅರಳೀಕಟ್ಟೆ ರಸ್ತೆಯವರೆಗೂ ಇದೆ. ಸುಮಾರು '300 x 400' ಇರಬಹುದು.

ಕಪ್ಪು ಹೆಂಚಿನ ಮನೆ, ದಿವಾನಖಾನೆ, ಭೋಜನಶಾಲೆ, ಪಾಕಶಾಲೆ, ಕತ್ತಲು ಕೋಣೆ, ಬಾಣಂತಿ ಕೋಣೆ, ಜಳಕದ ಕೋಣೆ, ಆಲೋಚನಾ ಮಂದಿರ (ಪಾಯಿಖಾನೆ), ಅತಿಥಿಗೃಹ, ದೇವರ ಮನೆ ಅಲ್ಲದೇ ಮುಂದಿನ ದೊಡ್ಡ ಹಜಾರ, ಮಹಾದ್ವಾರದಲ್ಲೇ ಬೆಂಗಳೂರಿನ ಮ್ಯೂಜಿಯಂನಲ್ಲಿರುವ ಬರ್ಮಾಗಂಟೆಯಂತಹ ಭಾರೀ ಗಂಟೆಯೊಂದು ತೂಗುಬಿದ್ದಿದ್ದು (ಈ ಮನೆಯ ಕರೆಗಂಟೆ) - ಈಗ ಅದರ ನಾಲಿಗೆಯೂ ಬಿದ್ದುಹೋಗಿದೆ. ...ಏನಪ್ಪಾ, ಧಾರಾವಾಹಿನೇ ಶುರುಮಾಡಿಬಿಟ್ಟನಲ್ಲ ಇವನು ಅಂತ ನಿಮಗನ್ನಿಸಬಹುದು. ನಿಮ್ಮ ಊಹೆ ಸರಿ!

ಇತ್ತೀಚಿನ ದಿವಸಗಳಲ್ಲಿ ನಮ್ಮೂರಿನ ಮೇನ್ ರೋಡ್‌ನಲ್ಲಿ ಓಡಾಡುವ ಜನಗಳ ಬಾಯಿಗೆ ಬೀಗ ಹಾಕುವವರು ಯಾರು? ಎದುರಿಗೆ ಬಂದವರನ್ನು ''ಎಲ್ಲಿಗೆ ಬಂತಪ್ಪ ಧಾರಾವಾಹಿ?'' ಎಂದು ಕೇಳಿದರೆ ಗೊತ್ತಿಲ್ಲದವರು ಟಿ.ವಿ. ಧಾರಾವಾಹಿ ಬಗ್ಗೆ ಕೇಳಿದರೆಂದು ತಿಳಿದು ರಾತ್ರಿಯೋ, ಹಗಲೋ ತಾವು ನೋಡಿದ ಸೀರಿಯಲ್ ಬಗ್ಗೆ ಹೇಳಹೊರಟರೆ, ಅದಲ್ಲಪ್ಪ, ''ನಮ್ಮ ಬುರುಡೆ ಬಾಜೀರಾಯರ ಮನೆಯೊಂದು ಮೂರು ಬೀಗ'' ಈ ಧಾರಾವಾಹಿಯ ಬಗ್ಗೆ ಕೇಳಿದ್ದು ಎಂದು ಮುಸಿ ಮುಸಿ ನಗುತ್ತಾರೆ.

ಹೌದು ಇದೂ ಒಂದು ಮುಗಿಯದ ಧಾರಾವಾಹಿ. ಬುರುಡೆ ಬ್ರದರ್ಸ್ ಇದ್ದಾಗಲೇ ಬೀಗ ಹಾಕಿದ್ದ ಈ ಮನೆ ಕಿತಾಪತಿಯವರು ಪೌತಿಯಾದ ನಂತರ ಅವರ ಮಕ್ಕಳಿಬ್ಬರು ಮೆಜಾರ್ಟಿಗೆ ಬಂದಿದ್ದಾರೆ. ದೊಡ್ಡಪ್ಪ ಎಷ್ಟೇ ಬುರುಡೆ ಹೊಡೆದರೂ ಕಿತಾಪತಿಯ ಮಕ್ಕಳಿಬ್ಬರೂ ಜಪ್ಪಯ್ಯ ಎನ್ನದೆ ತಮ್ಮ ಪಾಲಿನ ಹಿಸ್ಸೆಗೆ ಡಿಮ್ಯಾಂಡ್ ಮಾಡುತ್ತಾರೆ. ಒಟ್ಟಾರೆ

ಆಸ್ತಿಯನ್ನು ಹೀಗೆ ಬೀಳುಗೆಡವಿದರೆ ಯಾರಿಗೂ ಲಾಭವಿಲ್ಲ. ಸರಿಯಾದ ಗಿರಾಕಿ ಬಂದರೆ ಮಾರಿಬಿಡುವ ಎಂದು ಮೂವರು ಹಕ್ಕುದಾರರೂ ಯೋಚಿಸುತ್ತಾರೆ. ಬಾಗೂರಿನಲ್ಲಿರುವ ಶ್ರೀಮಂತರ ಕಣ್ಣು ಈಗ ಮನೆಯ ಮೇಲೆ. ಒಬ್ಬೊಬ್ಬರೇ ಗಿರಾಕಿಗಳು ಕೊಳ್ಳಲು ಮುಂದೆ ಬರುತ್ತಾರೆ. ರೇಟು ಬಾಗೂರಿನ ಬೂದಿ ಮಣ್ಣಿನ ಮನೆಗೆ ಬೆಂಗಳೂರಿನ ಬಸವನಗುಡಿಯ ಬೆಲೆ! ಆದಾಗ್ಯೂ ಊರಿನವರು ಹೆದರಿಸಿ, ಬೆದರಿಸಿ, ಮಾಟಮಂತ್ರ ಮಾಡಿಸಿದರೂ ಯಾವುದೂ ಪ್ರಯೋಜನಕ್ಕೆ ಬರಲಿಲ್ಲ. ಈ ಎಲ್ಲಾ ಘಟನೆಗಳು ಟಿ.ವಿ.ಯಲ್ಲಿ ಬರುವ ಯಾವ ಧಾರಾವಾಹಿಗೂ ಕಡಿಮೆ ಇಲ್ಲದಂತೆ ಮುಂದುವರಿಯುತ್ತಿದೆ.

ದಿನಬೆಳಗಾದರೆ ಬುರುಡೆ ಮತ್ತು ಕಿತಾಪತಿಯ ಮಕ್ಕಳಲ್ಲಿ ಗುಟ್ಟಾಗಿ ನಡೆಯುತ್ತಿದ್ದ ಮನೆ ಜಗಳ ಈಗ ಬಹಿರಂಗವಾಗಿಯೇ ನಡೆಯುತ್ತಿದೆ.

ಇದ್ದಕ್ಕಿದ್ದಂತೆ ಒಂದು ಮುಂಜಾನೆ ಈ ಮಹಾಮನೆಯ ಮಹಾದ್ವಾರಕ್ಕೆ 'ಮೂರು ಬೀಗಗಳು' ಬಿದ್ದಿವೆ. ಊರವರ, ಬಂಧುಬಳಗದವರ ಬುದ್ಧಿವಾದಗಳು ಪ್ರಯೋಜನವಾಗದೆ ''ಮನೆಯೊಂದು ಮೂರು ಬೀಗ'' ಧಾರಾವಾಹಿಯಂತೆ ಬಾಗೂರು ಜನಗಳ ಬಾಯಲ್ಲಿ ದಿನಕ್ಕೊಂದು ಕಂತಿನಂತೆ ಮುಂದುವರೆಯುತ್ತಲೇ ಇದೆ.

ಈ ಧಾರಾವಾಹಿಯ ಮುಕ್ತಾಯ ಹೇಗಾಗುವುದೆಂಬುದನ್ನು ಹೇಳುವುದು ಕಷ್ಟ!

---

## ಕೋಪ ತೀರಿಸಿಕೊಳ್ಳೋದು

ಸೋಮು ಮತ್ತು ಅವನ ಬಾಸ್ ಬ್ಯಾಂಕಲ್ಲಿ ಹಣ ಪಡೆಯಲು ಸರತಿ ಸಾಲಿನಲ್ಲಿ ನಿಂತಿದ್ದರು. ಇದ್ದಕ್ಕಿದ್ದಂತೆ ಒಬ್ಬ ದರೋಡೆಕೋರ ಪಿಸ್ತೂಲ್ ತೋರಿಸಿ ಬ್ಯಾಂಕಿನಲ್ಲಿದ್ದವರನ್ನೆಲ್ಲ ಹೆದರಿಸಿ ಕ್ಯಾಷಿಯರ್‌ನಿಂದ ಎಲ್ಲಾ ಹಣ ಕಿತ್ಕೊಂಡ. ಬ್ಯಾಂಕಿನಲ್ಲಿದ್ದವರೆಲ್ಲ ಗಾಬರಿಯಾಗಿದ್ದರು. ಸೋಮು ಮುಂದೆ ನಿಂತಿದ್ದವನೊಬ್ಬನಿಗೆ ಪಿಸ್ತೂಲ್ ತೋರಿಸಿ ದರೋಡೆಕೋರ ನಾನು ಬ್ಯಾಂಕ್ ಲೂಟಿ ಹೊಡೆದಿದ್ದನ್ನು ನೀನು ನೋಡಿದೆಯಾ ಅಂತ ಕೇಳಿದ. ಅವನು ಹೌದು ಅಂದಿದ್ದಕ್ಕೆ ಗುಂಡು ಹಾರಿಸಿ ಒಂದೇ ಸಾರಿಗೆ ಅವನನ್ನು ಕೊಂದ. ನಂತರ ಅವನು ಸೋಮು ಕಡೆ ತಿರುಗಿ ನಾನು ಬ್ಯಾಂಕ್ ಲೂಟಿ ಮಾಡಿದ್ದನ್ನು ನೀನು ನೋಡಿದೆಯಾ ಅಂತ ಕೇಳಿದ್ದಕ್ಕೆ ಸೋಮು ನಾನು ನೋಡಲಿಲ್ಲ ಆದರೆ ನಮ್ಮ ಬಾಸ್ ನೋಡಿದರು ಅಂತ ಬಾಸ್ ಕಡೆ ಕೈ ತೋರಿದ.

- ಸುಕೇಶವ

# ಯಾರಾದರೇನು ಶಿವಾ?

**- ನಮೋರಾಗಾ**

**ಯಾ**ರು ಮುಂದಿನ ಪ್ರಧಾನಿ?

ಯಾರಾದರೆ ನಮಗೇನು?

ಅದೇಕೆ ಹಾಗಂತಿ?

ಏಕೆಂದರೆ ನಮ್ಮ ಹಳೇ ಪ್ರಧಾನಿಗಳ ಇತಿಹಾಸ ಕೆದಕು..

ಅಂದರೆ?

ನೋಡಪ್ಪಾ, ನೆಹರು ಪ್ರಧಾನಿ ಆಗಿ ಒಬ್ಬ ಶ್ರೀಮಂತ ಸಹ ನಮ್ಮ ದೇಶದ ಪ್ರಧಾನಿ ಆಗಬಹುದು ಎಂದು ತೋರಿಸಿದರು.

ಹೌದು.

**ಈ ಲಾಜಿಕ್ ನೀವು ಒಪ್ಪುತ್ತೀರಾ?**

ಮತ್ತೆ ಲಾಲ್‌ಬಹದ್ದೂರ್ ಶಾಸ್ತ್ರಿ? ಒಬ್ಬ ಬಡವ ಸಹ ಪ್ರಧಾನಿ ಆಗಬಹುದು ಎಂದು ಸಾಬೀತು ಮಾಡಿದರು.

ನಿಜ ನಿಜ.

ಮತ್ತೆ ಇಂದಿರಮ್ಮ? ಒಬ್ಬ ಮಹಿಳೆ ಈ ದೇಶಾನ ಆಳಬಹುದು ಎಂದು ಸಾಧಿಸಿದರು.

ಕರೆಕ್ಟ್.

ಈಗ ಮೊರಾರ್ಜಿ ದೇಸಾಯಿ ಸರದಿ. ಅವರೇನು ಸಾಬೀತು ಮಾಡಿದರು?

ಏನು?

ಒಬ್ಬ ವಿಚಿತ್ರ ಸ್ವಭಾವದ ಮುದುಕ ಸಹ ಆ ಗದ್ದುಗೆಗೆ ಏರಬಹುದು ಎಂದು ತೋರಿಸಿದರು.

ಯು ಆರ್ ರೈಟ್ ಐ ಸೆ!

ನೆಕ್ಸ್ಟ್ ರಾಜೀವ್ ಗಾಂಧಿ. ಒಬ್ಬ ಆರ್ಡಿನರಿ ಪೈಲಟ್‌ಗೂ ಪ್ರಧಾನಿ ಆಗೋ ಅವಕಾಶ ಇದೆ ಎಂದು ಅವರಿಂದ ತಿಳಿಯಿತು. ನೊ?

ಹೌದು.

ವಿ.ಪಿ. ಸಿಂಗ್ ಅವರು ಈ ಪ್ರಜಾಪ್ರಭುತ್ವದಲ್ಲಿ ಒಬ್ಬ ರಾಜವಂಶದವರೂ ಸಹ ಅಧಿಕಾರ ನಡೆಸಬಹುದು ಎಂದು ಸಾಬೀತು ಮಾಡಿದರು. ಹೌದಲ್ಲೋ?

ಬರೋಬರಿ.

ಮತ್ತೆ ನರಸಿಂಹರಾಯರು, ಒಬ್ಬ ವಿದ್ವಾಂಸರಿಗೂ ಪ್ರಧಾನಿಯಾಗೋ ಅವಕಾಶ ಇದೆ. ಬರೇ ಪುಡಾರಿಗಳಿಗೆ ಅಲ್ಲ ಎಂದು ತೋರಿಸಿದರು. ಹಾಗೆಯೇ ಚರಣ್ ಸಿಂಗ್ ಅವರು ಒಬ್ಬ ನಿರಕ್ಷರಕುಕ್ಷಿಗೂ ಆ ಹುದ್ದೆ ಸಿಗುತ್ತದೆ ಎಂದು ಸಾಬೀತು ಮಾಡಿದರು.

ಮತ್ತೆ ನಮ್ಮ ದೇವೇ ಗೌಡರು?

ಯಾರು ಬೇಕಾದರೂ ಸಹ ಪ್ರಧಾನಿ ಆಗಬಹುದು ಎಂದು ತೋರಿಸಿದರು. ವಾಜಪೇಯಿ ಅವರು ಒಬ್ಬ ಬ್ರಹ್ಮಚಾರಿ ಕವಿಗೂ ಆ ಕುರ್ಚಿ ಸಿಗುತ್ತದೆ ಎಂದು ತೋರಿಸಿಕೊಟ್ಟರು.

ಮತ್ತೆ ಮನಮೋಹನ್ ಸಿಂಗ್?

ಹಹಾ! ಈ ದೇಶಕ್ಕೆ ಒಬ್ಬ ಪ್ರಧಾನಿಯ ಅಗತ್ಯವೇ ಇಲ್ಲ ಎಂದು ತೋರಿಸುತ್ತಾ ಇದ್ದಾರೆ. ಅಂದಮೇಲೆ..

ಅಂದಮೇಲೆ?

ಯಾರು ಪ್ರಧಾನಿ ಆದರೆ ಏನೀಗ? ಯಾಕೀ ಅನವಶ್ಯಕ ಚರ್ಚೆ?

ಆ!!!

---

## ಯಾರ್‍ಯಾರು ಎಲ್ಲೆಲ್ಲಿಗೆ?

ಪ್ರಥಮ ದರ್ಜೆಯಲ್ಲಿ ಪಾಸಾದ ಬುದ್ಧಿವಂತ ವಿದ್ಯಾರ್ಥಿಗಳು ಇಂಜಿನಿಯರಿಂಗ್ ಅಥವಾ ಮೆಡಿಕಲ್ ಕಾಲೇಜಿಗೆ ಸೇರಿ ಇಂಜಿನಿಯರೂ, ಡಾಕ್ಟರೂ ಆಗುತ್ತಾರೆ.

ಎರಡನೇ ದರ್ಜೆಯಲ್ಲಿ ಪಾಸಾದವರು ಎಂ.ಬಿ.ಎ. ಓದಿ ಆಡಳಿತಾಧಿಕಾರಿಗಳಾಗಿ ಇಂಜಿನಿಯರುಗಳನ್ನು, ಡಾಕ್ಟರುಗಳನ್ನು ನಿಯಂತ್ರಿಸುತ್ತಾರೆ.

ಮೂರನೇ ದರ್ಜೆಯಲ್ಲಿ ಪಾಸಾದವರು ರಾಜಕೀಯಕ್ಕೆ ಧುಮುಕಿ ಶಾಸಕರು, ಮಂತ್ರಿಗಳೂ ಆಗಿ ಮೇಲಿನ ಮೂವರನ್ನೂ ನಿಯಂತ್ರಿಸುತ್ತಾರೆ.

ಕಡೆಯದಾಗಿ ವಿದ್ಯೆಯೇ ಹತ್ತದೇ ಇತರ ಹವ್ಯಾಸಗಳಿಗೆ ತೊಡಗಿದವರು ಕೊನೆಗೆ ಭೂಗತ ದೊರೆಗಳಾಗಿ ಮೇಲಿನ ಎಲ್ಲರನ್ನೂ ನಿಯಂತ್ರಿಸುತ್ತಾರೆ.

ಇನ್ನು ಶಾಲೆಯ ತಂಟೆಗೇ ಹೋಗದೇ ಇದ್ದವರು ಸನ್ಯಾಸಿಗಳೂ, ಸ್ವಾಮಿಗಳೂ ಆಗಿ ಮಠ ಕಟ್ಟುತ್ತಾರೆ. ಆಗ ಮೇಲಿನ ಎಲ್ಲರೂ ಅವರಲ್ಲಿಗೆ ಹೋಗುತ್ತಾರೆ.

# ಪಾಲಿಗೆ ಬಂದದ್ದು.....

- ಎಚ್. ಗೋಪಾಲಕೃಷ್ಣ

**ಅ**ದೊಂದು ಪುಟ್ಟ ಹಳ್ಳಿ. ಹಳ್ಳಿಗೆ ಇರುವುದು ಒಂದೇ ಶಾಲೆ. ಆ ಶಾಲೆಯಲ್ಲಿ ಒಬ್ಬರೇ ಶಿಕ್ಷಕಿ, ಅವರೇ ಒಂದರಿಂದ ಏಳನೇ ತರಗತಿಯವರಿಗೂ ಪಾಠ ಹೇಳಿಕೊಡಬೇಕು. ಹಳ್ಳಿಯಲ್ಲಿನ ಹುಡುಗರು ಹುಡುಗಿಯರು ಅವರಿಗೆ ಬೇರೆ ಕೆಲಸವಿಲ್ಲದಿದ್ದಾಗ, ಅಪ್ಪ ಅಮ್ಮ ಇವರ ಬಗ್ಗೆ ಗಮನ ಹರಿಸದಿದ್ದಾಗ ಶಾಲೆಗೆ ಬಂದು ವಿದ್ಯೆ ಕಲಿಯುವ ಪರಿಪಾಠ ಬೆಳೆಸಿಕೊಂಡಿದ್ದರು.

ಆ ಶಾಲೆಯಲ್ಲಿಯೂ ವಿದ್ಯಾರ್ಥಿಗಳು ಹಲವು ಸಲ ಮೇಡಂ ಗೇ ತಬ್ಬಿಬ್ಬು ಮಾಡುವ ಪ್ರಶ್ನೆಗಳನ್ನು ಹಾಕುತ್ತಿದ್ದರು. ಮೇಡಂ ಪ್ರಶ್ನೆಗಳಿಗೆ ಯೋಚಿಸಿ ಸಾವಧಾನದಿಂದ ಉತ್ತರ ನೀಡುವ ಅಭ್ಯಾಸ ಬೆಳೆಸಿಕೊಂಡಿದ್ದರು.

ಒಮ್ಮೆ ಆರನೇ ತರಗತಿಯಲ್ಲಿನ ವಿದ್ಯಾರ್ಥಿಗೆ ಒಂದು ಸಂಶಯ ಹುಟ್ಟಿತು. ಅದು ಪ್ರೀತಿಯೆನ್ನುವುದು ಹೇಗಿರುತ್ತೆ?

ತನ್ನ ಸಂಶಯವನ್ನು ಮೇಡಂಗೆ ಹೇಳಿದ.

''ಮೇಡಂ, ಪ್ರೀತಿಯೆಂದರೇನು?''

ಮೇಡಂ ಅವನನ್ನು ಕೂಡಿಸಿಕೊಂಡರು.

''.....ಅಬ್ಬಾ ಈ ವಯಸ್ಸಿಗೇ ನಿನ್ನ ತಲೆಯಲ್ಲಿ ಎಂಥಹ ಪ್ರಶ್ನೆ ಹುಟ್ಟಿದೆ? ನಿನ್ನ ಪ್ರಶ್ನೆಗೆ ಉತ್ತರ ಅಷ್ಟು ಸುಲಭವಾಗಿ ಹೇಳುವುದಕ್ಕೆ ಆಗುವುದಿಲ್ಲ. ನಿನ್ನ ಪ್ರಶ್ನೆಗೆ ಉತ್ತರ ಹುಡುಕಲು ಒಂದು ಸುಲಭವಾದ ಉಪಾಯ ಹೇಳುತ್ತೇನೆ - ನೇರವಾಗಿ ಭತ್ತದ ಗದ್ದೆಗೆ ಹೋಗು. ಅಲ್ಲಿ ನಿನಗೆ ಕಾಣುವ ದೊಡ್ಡ ಭತ್ತದ ತೆನೆಯನ್ನು ತೆಗೆದುಕೊಂಡು ಬಾ. ಭತ್ತದ ಗದ್ದೆಗೆ ಹೋದ ನಂತರ ಹಿಂದೆ ಬಂದು ಬೇರೆ ಭತ್ತ ಆಯ್ದುಕೊಳ್ಳುವ ಹಾಗಿಲ್ಲ, ಗದ್ದೆಯಲ್ಲಿ ಹೆಜ್ಜೆ ಹಿಂದೆ ಹಾಕಬಾರದು - ಈ ಮಿತಿಯಲ್ಲಿಯೇ ನಿನ್ನ ಆಯ್ಕೆಯಿರಬೇಕು........''

ಹುಡುಗ ತಲೆಯಾಡಿಸಿದ. ಭತ್ತದ ಗದ್ದೆಗೆ ನಡೆದ. ಮೊದಲ ಸಾಲಿನಲ್ಲಿನ ತೆನೆಗಳು ಇವನಿಗೆ ದಪ್ಪ ಅನಿಸಲಿಲ್ಲ, ಇದಕ್ಕಿಂತಲೂ ದಪ್ಪವಿರುವ ತೆನೆ ಮುಂದೆ ಇರಬಹುದು ಅಂದುಕೊಂಡು ಹುಡುಕಿದ, ಹುಡುಕಿದ, ಹುಡುಕಿದ.....

ಮೊದಮೊದಲು ನೋಡಿದ್ದ ಭತ್ತದ ತೆನೆಗಿಂತಲೂ ಮಿಕ್ಕವು ದಪ್ಪವಾಗಿವೆ ಅನಿಸಿದರೂ ಕೊನೆಕೊನೆಗೆ ಮೊದಲು ನೋಡಿದ್ದವೇ ಹೆಚ್ಚು ದಪ್ಪಗಿದ್ದವು ಎನ್ನುವ ಭಾವನೆ ಶುರುವಾಯಿತು. ದೊಡ್ಡದನ್ನು ಪಡೆಯಲು ಆಗಲಿಲ್ಲವೇ ಎನ್ನುವ ದುಃಖ ಅವನಲ್ಲಿ ಹುಟ್ಟಿತು. ತನ್ನ ಹುಡುಕಾಟ ನಿಲ್ಲಿಸಿದ. ಬರಿಕೈಯಲ್ಲಿ ಶಿಕ್ಷಕರ ಮುಂದೆ ಹೋಗಿ ನಿಂತ.

‘‘ದೊಡ್ಡ ಭತ್ತದ ತೆನೆ ಸಿಕ್ಕಿತಾ?’’ ಮೇಡಂ ಕೇಳಿದರು.

‘‘ಇಲ್ಲಾ ಮೇಡಂ. ಮೊದಮೊದಲು ಇನ್ನೂ ದಪ್ಪಗಿರುವ ತೆನೆ ಸಿಗುತ್ತೆ ಅಂತ ಮೊದಲು ಕಾಣಿಸಿದ ತೆನೆಗಳನ್ನು ಆರಿಸಿಕೊಳ್ಳಲಿಲ್ಲ, ಕೊನೆಕೊನೆಗೆ ಮೊದಲು ನೋಡಿದ್ದೇ ಚೆನ್ನಿತ್ತು ಅಂತ ಅನಿಸಿತು.. ಅದಕ್ಕೇ ಏನೂ ಆಯ್ಕೆಮಾಡಿಕೊಳ್ಳದೇ ಹಾಗೇ ವಾಪಸಾದೆ...’’ ಅಂದ.

‘‘ಇದೇ ಮಗೂ ಪ್ರೀತಿ ಅಂದರೆ... ಇನ್ನೂ ಉತ್ತಮವಾಗಿರುವುದನ್ನು ಹುಡುಕುತ್ತಲೇ ಇರುತ್ತೇವೆ, ಅರಿವು ಬರುವ ವೇಳೆಗೆ ನಮಗೆಬೇಕಾದ್ದನ್ನು ಕಳೆದುಕೊಂಡಿರುತ್ತೇವೆ....’’

ವಿದ್ಯಾರ್ಥಿ ‘‘ಮೇಡಂ ಹಾಗಿದ್ದರೆ ಮದುವೆಯೆಂದರೇನು?’’ ಅಂತ ಕೇಳಿದ.

‘‘ನಿನ್ನ ಈ ಪ್ರಶ್ನೆಗೂ ಮತ್ತೊಂದು ಉಪಾಯ ಹೇಳುತ್ತೇನೆ...’’

‘‘ಅದೇನು ಹೇಳಿ ಮೇಡಂ...’’

‘‘ಯಾವುದಾದರೂ ಕಾಳುಗಳನ್ನು ಬೆಳೆಯುವ ಹೊಲಕ್ಕೆ ಹೋಗು. ಅಲ್ಲಿ ನಿನಗೆ ದಪ್ಪನಾಗಿ ಕಾಣಿಸುವ ಕಾಳನ್ನು ತೆಗೆದುಕೊಂಡು ಬಾ. ಈಗಲೂ ನಿನಗೆ ಅದೇ ಇತಿಮಿತಿ ಇರುತ್ತೆ. ಕಾಳುಗಳನ್ನು ಬೆಳೆಯುವ ಹೊಲಕ್ಕೆ ಹೋದ ನಂತರ ಹಿಂದೆ ಬಂದು ಬೇರೆ ಕಾಳು ಆಯ್ದುಕೊಳ್ಳುವ ಹಾಗಿಲ್ಲ. ಹೊಲದಲ್ಲಿ ಹೆಜ್ಜೆ ಹಿಂದೆ ಹಾಕಬಾರದು. ಈ ಮಿತಿಯಲ್ಲಿಯೇ ನಿನ್ನ ಆಯ್ಕೆಯಿರಬೇಕು.’’

ವಿದ್ಯಾರ್ಥಿ ಕಾಳಿನ ಹೊಲಕ್ಕೆ ಹೋದ. ಈ ಬಾರಿ ಆತ ತುಂಬಾ ಹುಷಾರಿನಿಂದ ಹೆಜ್ಜೆ ಇಟ್ಟ. ಮೊದಲು ಮಾಡಿದ ತಪ್ಪು ಈಗ ಮಾಡಬಾರದು ಎಂದು ಅವನ ವಿವೇಕ ಅವನನ್ನು ಎಚ್ಚರಿಸಿತ್ತು. ಹೊಲದ ಮಧ್ಯ ಭಾಗಕ್ಕೆ ಬಂದ. ಇನ್ನೂ ಹುಡುಕುವುದು ಬೇಡ ಎಂದು ತೀರ್ಮಾನಿಸಿದ. ಸುಮಾರಾಗಿ ದಪ್ಪ ಎಂದು ಕಾಣಿಸುತ್ತಿದ್ದ ಕಾಳು ಆಯ್ದುಕೊಂಡ. ಹಿಂದೆ ಬಂದು ಮೇಡಂ ಎದುರು ನಿಂತ. ಮೇಡಂ ಈತ ತಂದ ಕಾಳು ನೋಡಿದರು.

‘‘ಈ ಸಲ ನೀನು ಕಾಳು ತಂದೇಬಿಟ್ಟೆ – ಹೋದ ಸಲದ ಹಾಗೆ ಬರೀ ಕೈಯಲ್ಲಿ ಬರಲಿಲ್ಲ. ಅಂದರೆ ನಿನ್ನಲ್ಲಿ ನಿನಗೆ ವಿಶ್ವಾಸ ಹುಟ್ಟಿತು. ಇದಕ್ಕಿಂತಲೂ ಉತ್ತಮ ಅನಿಸಬಹುದಾದ ಕಾಳುಗಳಿದ್ದರೂ ಇದೇ ಚೆನ್ನಿದೆ, ನನಗೆ ಸಿಗಬಹುದಾದ ಉತ್ತಮವಾದ ಕಾಳು ಇದೇ ಅಂತ ನಿನ್ನ ಮನಸ್ಸಿಗೆ ಬಂದಿದೆ. ಮದುವೆ ಅಂದರೆ ಇದೇ – ಸಿಕ್ಕಿದ ಸಂಗಾತಿಯೊಂದಿಗೆ ಪಾಲಿಗೆ ಪಂಚಾಮೃತ ಸಿಕ್ಕಿದೆ ಎಂದು ಭಾವಿಸಿ ಜೀವನ ನಡೆಸುವುದು....’’

‘‘ಪುಟ 23ರ ಯಾರು ಅಡ್ರೆಸ್ ಹೇಳಿದ್ದು ಪ್ರಶ್ನೆಗೆ ಉತ್ತರ’’

1. ಕುಡುಕನೊಬ್ಬ ಹೇಳಿದ್ದು
2. ಮಹಿಳೆಯೊಬ್ಬಳು ಹೇಳಿದ್ದು
3. ಹೇರ್ ಕಟಿಂಗ್ ಷಾಪಿನವನು ಹೇಳಿದ್ದು
4. ಅರ್ಚಕರು ಹೇಳಿದ್ದು
5. ವಿಮೆ ಏಜೆಂಟ್ ಹೇಳಿದ್ದು
6. ಕಟ್ಟಡ ಕಟ್ಟೋ ಕಂಟ್ರಾಕ್ಟರ್ ಹೇಳಿದ್ದು